School Leadership

TESS India

# Perspective on leadership: leading the school development plan

## ನಾಯಕತ್ವದ ದೃಷ್ಟಿಕೋನ:ಶಾಲಾಭಿವೃದ್ಧಿಯ ಯೋಜನೆಯ ಮುಂದಾಳತ್ವವಹಿಸುವುದು





Teacher Education through School-based Support in India
www.TESS-India.edu.in

The Open University

UKaid from the British people

CC BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ** (**Open Educational Resource-OER**) ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ಧಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು** (**National School leadership Curriculum Framework-India**) ಗುರುತಿಸಿರುವ ಶಾಲಾ ನಾಯಕತ್ವದ ಯಥಾದರ್ಶನ (1) ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ದಿನಚರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾ ಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಾಂಶುಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ  ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾಗಿರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.


ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ಆವೃತ್ತಿಗಳಲ್ಲಿ ಲಭ್ಯವಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತ ವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL15v1*
*Karnataka*

*Except for third party materials and oottherwise stated, this content is made availabblle under a Creative Commons Attribution-ShareAlike liceennce: http://creativecommons.org/licenses/by--sa/3.0/*
*TESS-India is led by The Open University UK and funded by UK aid from the UK government*

# ಈ ಘಟಕದ ಕುರಿತು

ಇದು ಶಾಲಾ ಸುಧಾರಣೆಯನ್ನು ಹೆಚ್ಚಿಸುವ ಎರಡು ಘಟಕಗಳಲ್ಲಿ ಎರಡನೆಯದಾಗಿದೆ. ಇದು ಶಾಲಾ ನಾಯಕತ್ವದ ಸ್ವಯಂ ಅವಲೋಕನದ ದೃಷ್ಟಿಕೋನವನ್ನು ಅನುಸರಿಸುತ್ತದೆ. ಈ ಘಟಕವು ಶಾಲಾ ಅಭಿವೃದ್ಧಿ ಯೋಜನೆಯ 5 ಮತ್ತು 6 ನೇಯ ಹಂತಗಳ ಮೇಲೆ ಬೆಳಕು ಚೆಲ್ಲುತ್ತದೆ. ಒಮ್ಮೆ ಶಾಲಾ ಸುಧಾರಣಾ ಸ್ವಯಂ ಅವಲೋಕನ ಮಾಡಿದರೆ ಅದರಿಂದ ಶಾಲಾ ನಾಯಕತ್ವ ಮತ್ತು ಶಾಲಾ ಅಭಿವೃದ್ಧಿ ಸಮಿತಿಯ ಶಾಲೆಯಲ್ಲಿನ ಉತ್ತಮ ಅಂಶಗಳು ಮತ್ತು ಶಾಲಾ ಅಭಿವೃದ್ಧಿಗೆ ಬೇಕಾದ ಅವಶ್ಯಕ ಅಂಶಗಳ ಅರಿವು ಮೂಡುತ್ತದೆ. ನೀವು ಮತ್ತು ನಿಮ್ಮ ನಾಯಕತ್ವದ ತಂಡ (ಸಣ್ಣ ಶಾಲೆಯಲ್ಲಿನ ಒಟ್ಟಾರೆ ಶಿಕ್ಷಕರು / ದೊಡ್ಡ ಶಾಲೆಯಲ್ಲಿನ ನಾಲದಕು ಅಥವಾ ಐದು ಹಿರಿಯ ಶಿಕ್ಷಕರು) ಶಾಲಾ ಸುಧಾರಣಾ ಅಂಶಗಳನ್ನು ಸುಧಾರಿಸಲು ಯೋಜನೆಗಳನ್ನು ಹಾಕಿಕೊಳ್ಳಬೇಕು ಈ ಘಟಕವು ನಿಮ್ಮನ್ನು ಯೊಜನಾ ಪ್ರಕ್ರಿಯೆಯತ್ತ ಸಾಗಲು ಮತ್ತು ನಿಮ್ಮ ಯೋಜನೆ ಸುಧಾರಿಸಲು ಸಹಾಯವಾಗುತ್ತದೆ.




**ಚಿತ್ರ : 1: ಸ್ವಯಂ ವಿಮರ್ಶಾ ವೃತ್ತ**

**( ವೃತ್ತಿಪರ ಶಿಕ್ಷಕರ ಅಭಿವೃದ್ಧಿ ಸೇವಾ ದಿಂದ ಆಯ್ದುಕೊಳ್ಳಲಾಗಿದೆ, ದಿನಾಂಕ ನಮೂದಿಸಿರುವುದಿಲ್ಲ)**

## ಕಲಿಕಾ ದಿನಚರಿ

ಈ ಘಟಕದ ಮೇಲೆ ಕಾರ್ಯ ನಿರ್ವಹಿಸುವಾಗ ನೀವು ನಿಮ್ಮ ಕಲಿಕಾ ದಿನಚರಿಯಲ್ಲಿ ಟಿಪ್ಪಣಿ ಮಾಡಿಕೊಳ್ಳಬೇಕಾಗುತ್ತದೆ. ನಿಮ್ಮ ಚಿಂತನೆ ಮತ್ತು ಯೋಜನೆಗಳನ್ನು ಸಂಗ್ರಹಿಸಿ ಬರೆಯುವ ಪುಸ್ತ, ಪ್ರಾಯಶಃ ನೀವು ಈಗಾಗಲೇ ಬರೆಯಲು ಪ್ರಾರಂಭಿಸಿರಬಹುದು.

ನೀವು ಈ ಘಟಕದ ಮಾಹಿತಿಯನ್ನು ಆಧರಿಸಿ ಒಬ್ಬರೆ ಕೆಲಸ ಮಾಡುತ್ತಿರಬಹುದು, ಆದರೆ ನೀವು ಇನ್ನೊಂದು ಶಾಲೆಯ ನಾಯಕನೊಂದಿಗೆ ಚರ್ಚಿಸಲು ಅರ್ಹರಿದ್ದರೆ ಇನ್ನು ಹೆಚ್ಚಿನದ್ದನ್ನು ಕಲಿಯಬಹುದು. ಅವರು ಈಗಾಗಲೆ ನಿಮ್ಮ ಸಹಕಾರ ಪಡೆದು ನಿಮ್ಮ ಸಹುದ್ಯೋಗಿ ಆಗಿರಬಹುದು ಅಥವಾ ಹೊಸ ವ್ಯಕ್ತಿ ಆಗಿರಬಹುದು. ಈ ಕೆಲಸವನ್ನು ಸಂಘಟನಾ ಆಧಾರಿತ ಅಥವಾ ಅನೌಪಚಾರಿಕ ರೀತಿಯಲ್ಲಿ ನಿರ್ವಹಿಸಬೇಕು. ನಿಮ್ಮ ಕಲಿಕಾ ದಿನಚರಿಯಲ್ಲಿ ಮಾಡಿಕೊಳ್ಳುವ ಟಿಪ್ಪಣಿಗಳು ನಿಮ್ಮ ಸುಧೀರ್ಘ ಕಲಿಕಾ ಸುಧಾರಣಾ ನಕ್ಷೆ ತಯಾರಿಸಲು ಮತ್ತು ಸಭೆಗಳಿಗೆ ಉಪಯೋಗಕಾರಿಯಾಗುತ್ತದೆ.

# ಈ ಘಟಕದಲ್ಲಿ ಶಾಲಾ ನಾಯಕರು ಏನನ್ನು ಕಲಿಯುವರು;

- ಪರಿಣಾಮಕಾರಿ ಶಾಲಾ ಯೋಜನಾ ವಿಧಾನ ಇದರ ಪ್ರಮುಖ ಲಕ್ಷಣಗಳು
- ಮಕ್ಕಳ ಕಲಿಕೆಯಲ್ಲಿ ಶಾಲಾವಾರು ಪ್ರಗತಿಗಾಗಿ ಯೋಜನೆ
- ಸಂಘ ಸಂಸ್ಥೆ ಪದಾದಿಕಾರಿಗಳು ಮತ್ತು ವಿಶೇಷ ಶಾಲಾ ಉಸ್ತುವಾರಿ ಸಮಿತಿಯು ಶಾಲಾ ಅಭಿವೃದ್ಧಿಯೋಜನೆಗಳಲ್ಲಿ ತೊಡಗಿಕೊಳ್ಳುವಂತೆ ಮಾಡುವುದು
- ಪರಿಣಾಮಕಾರಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಬದಲಾವಣೆಯುಂಟು ಮಾಡುವ ಶಾಲಾ ಅಭಿವೃದ್ಧಿಯೋಜನೆ ಸಿದ್ಧಪಡಿಸಿಕೊಳ್ಳುವುದು.

# 1 ಶಾಲಾ ಅಭಿವೃದ್ಧಿಯೋಜನೆಯನ್ನು ಪರಿಚಯಿಸುವುದು



ಚಿತ್ರ **2** ಶಾಲಾ ಅಭಿವೃದ್ಧಿ ಯೋಜನೆಯು ಶಾಲಾ ಪ್ರಗತಿಯಲ್ಲಿ ಬದಲಾವಣೆಯನ್ನುಂಟು ಮಾಡುವ ಒಂದು ಮಾರ್ಗಸೂಚಿಯಾಗಿದೆ

A school development plan (SDP) provides the basis for school improvement and should reflect the ಒಂದು ಶಾಲಾ ಅಭಿವೃದ್ಧಿ ಯೋಜನೆಯು (ಎಸ್ ಡಿ ಪಿ) ಶಾಲೆಯ ಪ್ರಗತಿ ಮತ್ತು ಶಾಲೆಯ ತಾತ್ವಿಕತೆ ಹಾಗೂ ದೃಷ್ಟಿಕೋನವನ್ನು ಪ್ರತಿಫಲಿಸುತ್ತದೆ. ಇದು ಮುಂದಿನ ಅವಧಿಯಲ್ಲಿ ನೀಡಬೇಕಾದ ಆದ್ಯತೆಗಳ ಪಟ್ಟಿಯನ್ನು ಹೊಂದಿರುತ್ತದೆ ಉದಾ:– ಕೆಲವು ಶಾಲೆಗಳು ಸಾಮಾನ್ಯ ಮೂರು ವರ್ಷದ ಯೋಜನೆಯನ್ನು ಹೊಂದಿರುತ್ತವೆ.

ಶಾಲಾ ಅಭಿವೃದ್ಧಿ ಯೋಜನೆಯು ಶಾಲೆಯ ಸ್ವ ಮೌಲ್ಯಮಾಪನ ಮತ್ತು ಮಕ್ಕಳ ಕಲಿಕೆಯ ಮೂಲಕ ಉತ್ತಮ ಫಲಿತಾಂಶವನ್ನು ಸಾಧಿಸಲು ಶಾಲೆಯು ಯಾವರೀತಿ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಸುಮುದಾಯಕ್ಕೆ ಪರಿಚಯಿಸುತ್ತದೆ. ಯೋಜನೆಯ ಮಹತ್ವ ಏನೆಂಬುದನ್ನು ಅಂಶಗಳ ಅಧ್ಯಯನ ಮತ್ತು ಚಟುವಟಿಕೆಯು ಸಾದರಪಡಿಸುತ್ತದೆ.

## *ವ್ಯಕ್ತಿ / ಅಂಶದ ಅಧ್ಯಯನ* ಶಾಲಾ ಅಭಿವೃದ್ಧಿ ಯೋಜನೆಯು ಏಕೆ ಪ್ರಾಮುಖ್ಯತೆ ಹೊಂದಿದೆ?

ಶ್ರೀಮತಿ ನಾಗರಾಜು ಒಂದು ಗ್ರಾಮೀಣ ಪ್ರಾಥಮಿಕ ಶಾಲೆಯ ಶಿಕ್ಷಕ ನಾಯಕಿಯಾಗಿದ್ದು ಇತರ ಶಾಲಾ ನಾಯಕರಂತೆ ಸದಾ ಶ್ರೀಯಾ ಶೀಲವಾಗಿದ್ದು ಪ್ರತಿ ನಿತ್ಯ ತಾನು ಮಾಡಬೇಕಾದ ಕಾರ್ಯಚಟುವಟಿಕೆಗಳನ್ನು ಪಟ್ಟಿ ಮಾಡುವುದನ್ನು ರೂಢಿಸಿಕೊಂಡಿದ್ದರು.

<u>ಸೋಮವಾರ</u>

1) ಜಿಲ್ಲಾ ಮಟ್ಟದ ಅಧಿಕಾಗಳಿಗೆ ಶಾಲಾ ಮೆಲ್‌ಭಾವಣಿ ರೀಪೇರಿ ಬಗ್ಗೆ ಬರೆಯುವುದು
2) ಎರಡನೇ ವರ್ಗ ಶಿಕ್ಷಕ ಅನಿತಿ ತಡವಾಗಿ ಬಂದು ಶಾಲೆಯಲ್ಲಿ ಪಾಠ ಮಾಡುವ ಕುರಿತು
3) 5ನೇ ವರ್ಗದ ವಿದ್ಯಾರ್ಥಿಗಳ ಪ್ರವಾಸದ ಘಟನೆಗೆ ಸಂಬಂಧಿಸಿದಂತೆ ಶಾಲಾ ಅವಧಿಯ ನಂತರ ರಕ್ಷಿಯ ಪಾಲಕರನ್ನು ಕಾಣಲು ಪ್ರಯತ್ನಿಸುವುದು.
4) ಮಧ್ಯಾಹ್ನದ ಊಟದ ನಂತರ ಶಾಲೆಯ ಸುತ್ತ ಸಂಚಿರುಸುವುದು (ಕಲಿಕೆಯ ಸಂಚಾರ ನಿಮಗಿದು) – ಪಾಠದ ಸ್ವಾಭಾವದತ್ತ ಗಮನಹರಿಸುವುದು..
5) ಕೊನೆಯ ವಾರದ ಹಾಜರಾತಿ ಪಟ್ಟಿ ತಯಾರಿಸಿ ಅದನ್ನು ಮೇಲಾಧಿಕಾರಿಗಳಿಗೆ ತಿಳಿಸುವುದು
6) ಕೊನೆಯ ವಾರದ ಎಲ್ಲ ಈ–ಮೇಲ್ ಗಳಿಗೆ ಉತ್ತರಿಸಲಾಗಿದೆ ಎಂದು ಖಾತರಿ ಪಡಿಸಿಕೊಳ್ಳುವುದು
7) ಶಾಲಾ ಉಸ್ತುವಾರಿ ಸಮಿತಿಯ ಅಧ್ಯಕ್ಷರ ಸಭೆಯನ್ನು ವ್ಯವಸ್ಥೆಗೊಳಿಸುವುದು
8) ಸಮಿ ಶಿಕ್ಷಕಿಯ ಮುಂದಿನ ಮಿಶ್ರ ಪಠ್ಯಕ್ರಮ ಯೋಜನೆ ಪರಿಶೀಲಿಸುವುದು
9) ನಿಶಾಳ ತಂದೆಯ ತಕರಾರಿಗೆ ಉತ್ತರಿಸುವುದು
10) ನಾಲ್ಕನೇಯ ತರಗತಿಯಲ್ಲಿ ಶುಕ್ರವಾರ ದಿವಸ ನಡೆದ ಘಟನೆಯ ಪತ್ತೆ ಮಾಡುವುದು.

ಪ್ರತಿ ದಿವಸ ಮಿಸ್ ನಾಗರಾಜ ಇದೇ ರೀತಿ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ನಿರಂತರವಾಗಿ ಅನುಪಾಲನೆ ಮಾಡುತ್ತ ಸೂಕ್ತ ಆಡಳಿತ ನಿರ್ವಹಣೆ ಮಾಡುತ್ತಾಳೆ.

## ಚಟುವಟಿಕೆ – 1: ಯೋಜನೆ ಏತಕ್ಕೆ ಬೇಕು?

ಶ್ರೀಮತಿ ನಾಗರಾಜು ಇವರ ಸೋಮವಾರದ ಪಟ್ಟಿಯನ್ನು ಅವಲೋಕಿಸೋಣ ;

- ಮೇಲಿನ ಪಟ್ಟಿಯಲ್ಲಿ ಆಡಳಿತಾತ್ಮಕವಾಗಿ ಯಾವ ಅಂಶಗಳು ತುಂಬಾ ಅವಶ್ಯಕ?
- ಮೇಲಿನ ಪಟ್ಟಿಯಲ್ಲಿ ಯಾವ ಅಂಶಗಳು ಘಟನೆಗಳಿಗೆ ಸಾಕ್ಷಿಯಾಗಿವೆ?
- ಮೇಲಿನ ಪಟ್ಟಿಯಲ್ಲಿ ಯಾವ ಅಂಶಗಳು ಬೋಧನೆ ಹಾಗೂ ಕಲಿಕಾ ಪ್ರಗತಿಯಲ್ಲಿ ಕ್ರಿಯಾತ್ಮಕ ಅಂಶಗಳಾಗಿವೆ?
- ಒಂದು ವೇಳೆ ಅವಳು ಸದಾ ಕ್ರಿಯಾಶೀಲವಾಗಿದ್ದರೆ ಯಾವ ಅಂಶಗಳನ್ನು ಅವಳು ಪರಿಹರಿಸದೆ ಕೈ ಬಿಡಬಹುದಾಗಿವೆ?

ಶ್ರೀಮತಿ ನಾಗರಾಜುರವರಿಗೆ ತಮ್ಮ ಕಾರ್ಯದಲ್ಲಿ ಸಹಾಯವಾಗುವಂತೆ ನೀಡಬಹುದಾದ ಸಲಹೆಗಳನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ಪಟ್ಟಿ ಮಾಡಿ.

**ಚರ್ಚೆ :**

ಅಗತ್ಯವಾದ ಆಡಳಿತ ಅಥವಾ ಘಟನೆಗಳಿಗೆ ಪ್ರತಿಕ್ರಿಯಿಸಲು ನಿಮಗೆ 10 ರಲ್ಲಿ 8 ವಿಷಯಗಳ ಮನವರಿಕೆಯಾಗಿರಬಹುದು. 'ಒಂದು ಕಲಿಕಾ ಸಂಚಾರ' (ವಿಷಯ : 04) ಮತ್ತು 'ಮುಂದಿನ ದಿನದ ಮಿಶ್ರ–ಪಠ್ಯಕ್ರಮ ಯೋಜನಾ ತಪಾಸಣೆ' (ವಿಷಯ : 08); ಈ ಎರಡು ಸಂಗತಿಗಳು ವಿದ್ಯಾರ್ಥಿಗಳ ಅಭ್ಯಾಸಗಳಿಗೆ ಕಂಡಿತವಾಗಿಯೂ ನೇರ ಪರಿಣಾಮ ಉಂಟುಮಾಡುತ್ತವೆ. ಕಲಿಕಾ ಸಂಚಾರದಿಂದ ಅವರಿಗೆ (ನಾಯಕಿಗೆ) ಕಲಿಕಾ ಸ್ವಭಾವಕ್ಕೆ ಸಂಬಂಧಿಸಿದ ಮಾಹಿತಿಗಳ ಸಂಗ್ರಹಣೆಗೆ ಸಕ್ರಿಯಗೊಳಿಸುವುದು. ತನ್ನ ಶಿಕ್ಷಕರುಗಳನ್ನು ಉತ್ತಮವಾಗಿ ಪ್ರೋತ್ಸಾಹಿಸಲು ಇದರಿಂದ ಸಾಧ್ಯವಾಗುವುದು; ಮಿಶ್ರ–ಪಠ್ಯಕ್ರಮ ದಿನದ ಯೋಜನೆಯು ಚೆನ್ನಾಗಿ ಮುಂದುವರಿಕೆ ಖಾತ್ರಿ ಪಡಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳು ನಿಶ್ಚಿತವಾಗಿ ಸಕರಾತ್ಮಕ ಅನುಭವ ಪಡೆಯಲು ಸಹಾಯಕವಾಗುವುದು. ವಿಷಯ 4 ಮತ್ತು 8 ತುರ್ತಾದುದಲ್ಲ. ಆದುದರಿಂದ ಸುಲಭವಾಗಿ ಕಡೆಗಣಿಸಲ್ಪಡುವುದು. ಆದರೆ ಶ್ರೀಮತಿ ನಾಜರಾಜು ತನ್ನ ಶಾಲೆಯ ಕಲಿಕೆ ಮತ್ತು ಭೋಧನೆಯಲ್ಲಿ ವ್ಯತ್ಯಾಸ ತರಲು ಬಯಸಿದಲ್ಲಿ ಮೇಲಿನ ಎರಡು ವಿಷಯಗಳಿಗೆ ಹೆಚ್ಚು ಆಧ್ಯತೆಯಾಗುವುದು. ಕೆಲವು ಆಡಳಿತಾತ್ಮಕ ಕಾರ್ಯಗಳಿರಬಹುದು, ಇದನ್ನು ಅವರು ಯಾರದರೊಬ್ಬರಿಗೆ ನಿಯೋಜಿಸ ಬಹುದೇ? ಬಹುಷ: ತರಗತಿ ಶಿಕ್ಷಕರು ವಿಷಯ 5 ಮತ್ತು 9ರ ಜವಾಬ್ದಾರಿ ತೆಗೆದುಕೊಳ್ಳಲು ಸಾಧ್ಯವೇ?

ಒಂದು ಶಾಲೆಯ ನಾಯಕ, ದೈನಂದಿನ ಘಟನೆಗಳಲ್ಲಿ ಮತ್ತು ಆಡಳಿತದಲ್ಲಿ ಮುಳುಗುವುದು ಅತೀ ಸುಲಭ. ದೊಡ್ಡ ಸಮಸ್ಯೆಗಳಿಗೆ ಗಮನ ಹರಿಸಲು ಸಮಯ ಹೊಂದಿಸುವುದು ಮತ್ತು ಸಂಕೀರ್ಣ ಸಮಸ್ಯೆಗಳ ನಿವಾರಣೆಯು ಕೆಲವೊಂದು ಸಂದರ್ಭದಲ್ಲಿ ಕಷ್ಟಕರವಾಗುವುದು. ಶಾಲಾ ಅಭಿವೃದ್ಧಿ ಯೋಜನಾ (ಎಸ್.ಡಿ.ಪಿ) ಉದ್ದೇಶವು ನಿಮ್ಮಲ್ಲಿ ತಂತ್ರಕೌಶಲ್ಯಕ್ಕೆ ನೆರವಾಗುವುದು. ಆದ್ಯತೆ ಮತ್ತು ಗುರುತಿಸುವ ಕ್ರಿಯೆಗಳ ಮೂಲಕ ಅಂತಿಮವಾಗಿ ಬೋಧನೆ ಮತ್ತು ಕಲಿಕೆ ಸುಧಾರಣಯತ್ತ ಮುನ್ನಡೆಸುವುದು. ಇದು ಶಾಲೆಯಲ್ಲಿನ ಇತರ ಬಿಡುವಿಲ್ಲದ ಶಿಕ್ಷಕರುಗಳಿಗೂ ಅನ್ವಯಿಸುತ್ತದೆ. ಅಭಿವೃದ್ಧಿ

ಯೋಜನೆಯು ದೀರ್ಘಾವಧಿ ಗುರಿಯತ್ತ ನಿಮ್ಮೆಲ್ಲರನ್ನೂ ಕೇಂದ್ರೀಕರಿಸುವುದು ಮತ್ತು ಆಧ್ಯತಾ ವಿಷಯಗಳು ಮತ್ತು ಉದ್ದೇಶಗಳನ್ನು ಸಾಧಿಸಲು ಸಹಾಯಕವಾಗುವುದು.

ಶಾಲೆಯ ಅವಲೋಕನ ಕೈಗೊಂಡ ನಂತರ, ನೀವು ಮತ್ತು ನಿಮ್ಮ ನಾಯಕತ್ವ ತಂಡ(ಅಥವಾ ಸಹ ಶಿಕ್ಷಕರುಗಳು) ನಿಮ್ಮ ಶಾಲೆಯನ್ನು ಉತ್ತಮಗೊಳಿಸುವ ಸಂಗತಿಗಳನ್ನು ಗುರ್ತಿಸುವ ಅವಶ್ಯಕತೆ ಇದೆ. ಅವುಗಳಲ್ಲಿ ಕೆಳಗಿನವು ಒಳಗೊಳ್ಳಬಹುದು;

- ಪ್ರಾಥಮಿಕ ಶಿಕ್ಷಣದ ಕೊನೆಯಲ್ಲಿ ಸರಾಗವಾಗಿ ಓದುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವುದು.
- ಶಾಲಾ ದಿನದ ರಚನೆಯನ್ನು ಬದಲಾಯಿಸುವುದು.
- ನಿರಂತರವಾಗಿ ಮತ್ತು ಸಮಗ್ರ ಮೌಲ್ಯಮಾಪನ (ಸಿ.ಸಿ.ಇ) ಬಳಕೆಯನ್ನ ಶಾಲೆಯಲ್ಲಿ ಸುಧಾರಣೆಗೊಳ್ಳುವಂತೆ ಮಾಡುವುದು.

ಮೊದಲ ಹೆಜ್ಜೆಯಾಗಿ ಕೆಲವು ಆಧ್ಯತಾ ಕ್ಷೇತ್ರವನ್ನು ಗುರುತಿಸುವುದು. ಇದರಲ್ಲಿ ಕೆಲವು ಭಾಗೀದಾರರೊಂದಿಗೆ ಮಾತನಾಡುವುದನ್ನು ಒಳಗೊಳ್ಳುವುದಾಗಿರಬಹುದು. ಆಯ್ಕೆಗೊಳಿಸಿದ ಆಧ್ಯತೆಗಳು ಶಾಲೆಯ ಸ್ಥಿರ ಮತ್ತು ಸಾಮೂಹಿಕ ದೃಷ್ಟಿಕೋನ ವಾಗಿರಬೇಕು. (ನಾಯಕತ್ವದಬಗ್ಗೆ ಘಟಕದ ದೃಷ್ಟಿಕೋನ; ನಿಮ್ಮ ಶಾಲೆಯ ಬಗ್ಗೆ ಹಂಚಿಕೆಯ ದೃಷ್ಟಿಕೋನವನ್ನು ನಿರ್ಮಾಣದಿಂದ ಘಟಕ ಸಂಯೋಜನೆಗೂ ಉಪಯುಕ್ತವಾಗುವುದು).

ಒಮ್ಮೆ ನೀವು ದೂರದೃಷ್ಟಿ ಮತ್ತು ಆಧ್ಯತೆಗಳನ್ನು ಹೊಂದಿದ ನಂತರ, ಮುಂದಿನ ಹೆಜ್ಜೆ ಅಪೇಕ್ಷಿತ ಬದಲಾವಣೆಗಳಿಗೆ ಅನುಸಾರವಾದ ನಿರ್ಧಿಷ್ಟ ಕ್ರಮಗಳನ್ನು ರೂಪಿಸುವುದಾಗಿದೆ. ಉದಾಹಾರಣೆಯಾಗಿ, ಅವರೆಲ್ಲರೂ ಶಾಲಾ ದಿನ ಸ್ವರೂಪವನ್ನು ಬದಲಿಸಲು ಆಧ್ಯತೆಗೊಳಿಸಿದಲ್ಲಿ, ಕ್ರಿಯೆಗಳನ್ನು ಒಳಗೊಂಡಿರಲು ಸಾಧ್ಯವಿರುವವು:

- ಪರ್ಯಾಯ ಶಾಲಾ ದಿನದ ವೇಳಾಪಟ್ಟಿಗಾಗಿ ಎರಡು ಅಥವಾ ಮೂರು ಆಯ್ಕೆಗಳನ್ನು ಗುರುತಿಸುವುದು.
- ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರುಗಳೊಂದಿಗೆ ಸಮಾಲೋಚಿಸಿ ಹೆಚ್ಚು ಸೂಕ್ತವೆನಿಸುವ ಆಯ್ಕೆಯನ್ನು ಗುರುತಿಸುವುದು.
- ನಿಶ್ಚಿತ ಆಯ್ಕೆಗನುಗುಣವಾಗಿ ಪರಿಷ್ಕೃತ ವೇಳಾಪಟ್ಟಿಯನ್ನು ಪುನ: ತಯಾರಿಸುವುದು ಮತ್ತು ಸಿಬ್ಬಂದಿ ಮತ್ತು ಪೋಷಕರ ಅನುಮೋದನೆಗಾಗಿ ಪ್ರಸ್ತುತಪಡಿಸುವುದು.
- ಯೋಜನೆಯನ್ನು ವಿದ್ಯಾರ್ಥಿಗಳಿಗೆ ಸಂವಹನಗೊಳಿಸುವುದು ಮತ್ತು ಹೊಸ ದಿನ ಯಾವ ದಿನಾಂಕದಿಂದ ಆರಂಭಗೊಳ್ಳುವುದೆಂಬುದರ ಕುರಿತು ನಿರ್ಧರಿಸುವುದು.

ಪ್ರತಿಯೊಂದು ಕ್ರಿಯೆಗೂ ಯಾರಾದರೊಬ್ಬರು ಜವಾಬ್ದಾರಿ ತೆಗೆದುಕೊಳ್ಳುವವರನ್ನು ನೀವು ಗುರುತಿಸಬೇಕು. ಪೂರ್ಣಗೊಳಿಸಲು ಬೇಕಾಗುವ ಕಾಲವಧಿ ಮತ್ತು ಕೆಲವು ಮಾನದಂಡಗಳನ್ನು ಬಳಸಿ ಪ್ರಗತಿಯ ಮೇಲ್ವಿಚಾರಣೆಯನ್ನು ನಡೆಸಬೇಕು. ಚಟುವಟಿಕೆ 2, ನಿರ್ಧಿಷ್ಟವಾಗಿ ನಿಮಗೆ ನೆರವಾಗುವುದು. ವಿಷಯಗಳನ್ನು ಪಟ್ಟಿಮಾಡಿ ಬರೆಯುವುದು ಬಹಳ ಸುಲಭ, ಅವುಗಳಲ್ಲಿ ವಿದ್ಯಾರ್ಥಿನಿಯರ ಹಾಜರಾತಿ ಸುಧಾರಣೆ ಒಂದಾಗಿರಬಹುದು, ಇದಕ್ಕೆ ಯಾರಾದರೊಬ್ಬರು ನಿರ್ಧಿಷ್ಟ ಜವಾಬ್ದಾರಿಯನ್ನು ಹೊರದಿದ್ದರೆ ಯಾವೊಂದು ಕೆಲಸವಾಗುವುದಿಲ್ಲ.



ಚಿತ್ರ 3 ಉದ್ದೇಶಗಳಿಗೆ ಕ್ರಿಯೆಯ ಅವಶ್ಯಕತೆಯಿದೆ.

**ಚಟುವಟಿಕೆ–2 ಗುರಿಗಳನ್ನು ಕ್ರಿಯೆಗಳನ್ನಾಗಿ ಪರಿವರ್ತಿಸುವುದು**

ನೀವು ನಿರ್ದಿಷ್ಟವಾಗಿರಲು ಸಹಾಯ ಮಾಡುತ್ತದೆ. ವಿದ್ಯಾರ್ಥಿನಿಯರ ಹಾಜರಾತಿ ಹೆಚ್ಚಿಸುವ ಕ್ರಿಯೆಯನ್ನು ಒಂದು ಉದಾಹರಣೆಯನ್ನಾಗಿ ಪರಿಗಣಿಸುವುದು. ಈ ಕುರಿತು ಸಂಬಂಧಿಸಿದ ಅಂಶಗಳನ್ನು ಪಟ್ಟಿ ಮಾಡುವುದು. ಪಟ್ಟಿ ಮಾಡುವ ಕಾರ್ಯ ಸುಲಭ ಆದರೆ ನಿರ್ದಿಷ್ಟ ನಿರ್ಧಾರಗಳನ್ನು ಜಾರಿಗೆ ತರದಿದ್ದರೆ ಅದು ಏನನ್ನು ಸಾಧಿಸಿದಂತಾಗುವುದಿಲ್ಲ.

ವಿದ್ಯಾರ್ಥಿನಿಯರ ಹಾಜರಾತಿ ಹೆಚ್ಚಿಸಲು ನಿರ್ಧರಿಸುವ ಹೆಚ್ಚಸುವ ಗುರಿ. ಇದನ್ನು ಕಲಿಕಾ ದಿನಚರಿಯಲ್ಲಿ 5 ಅಂಶಗಳಲ್ಲಿ ನಾಲ್ಕನೇಯ ಅಂಶವನ್ನಾಗಿಸಿರಿಸಿಕೊಂಡು ಈ ಗುರಿಯನ್ನು ತಲುಪಲು ಕ್ರಿಯಾಯೋಜನೆಯನ್ನು ಸಿದ್ದಪಡಿಸುವುದು ನಂತರದಲ್ಲಿ ಇದು ವ್ಯಾಪಕವಾಗಿ ಇದು ಘಟಕಗಳಾಗಿ ಪರಿವರ್ತನೆಯಾಗಿತುದೆ ಆದರೆ ನೀವು ಪ್ರತಿ ಘಟಕವನ್ನು ಅವಲೋಕಿಸಿದಾಗ ನಿಮ್ಮ ಗುರಿ ಏನೆಂಬುದನ್ನು ತಿಳಿದುಕೊಂಡಿರ ಬೇಕು

ಮೊದಲನೇಯ ಹಂತ ಶಾಲೆಯ ಆದ್ಯತೆಯನ್ನು ಗುರುತಿಸುವುದು. ಶಾಲಾ ಅವಲೋಕನ ನಿಮಗೆ ಸಾಕಷ್ಟು ವಿಚಾರಗಳನ್ನು ದೊರಕಿಸಿಕೊಡಬಹುದು ಆದರೆ ಇವುಗಳನ್ನು ನೀವು ನಿಮ್ಮ ಆಡಳಿತ ಮಂಡಳಿಯೊಂದಿಗೆ ಚರ್ಚಿಸುವುದು ತುಂಬಾ ಅವಶ್ಯಕವಾಗಿದೆ.

# 2. ಜವಾಬ್ದಾರಿಯತ ವ್ಯಕ್ತಿಗಳೊಂದಿಗೆ ಕಾರ್ಯ

ಶಾಲಾ ಅಭಿವೃಧಿ ಯೋಜನೆಯು ಸುಧಾರಿಸುತ್ತಿರುವ ಶಾಲಾ ಯೋಜನೆಯ ಮೂಲ ಸಾಧನವಾಗಿದೆ. ಇದು ಶಿಕ್ಷಣ ಹಕ್ಕು ಕಾಯ್ದೆ 2009 ಪ್ರಕಾರ ಶಾಲಾ ವಿಕೇಂದ್ರಿಕರಣ ನಿರ್ದಾರದ ಸರಕಾರದ ಶೈಕ್ಷಣಿಕ ಶಾಸನದ ಭಾಗವಾಗಿದೆ. ಶಿಕ್ಷಣ ಹಕ್ಕು ಕಾಯ್ದೆಯ ಪ್ರಕಾರ ;

ಶಾಲಾ ಆಡಳಿತ ಸಮಿತಿಯು ಈಕೆಳಗಿನ ಅಂಶಗಳನ್ನು ನಿರ್ವಹಿಸಬೇಕು

1. ಶಾಲಾ ಕೆಲಸದ ಮೇಲ್ವಿಚಾರಣೆ
2. ಶಾಲೆ ಸುದಾರಣೆ ಯೋಜನೆ ತಯಾರಿಸುವುದು ಮತ್ತು ಸೂಕ್ತ ಸಲಹೆ ನೀಡುವುದು
3. ಸರ್ಕಾರ ಸ್ಥಳಿಯ ಪ್ರಾದಿಕಾರಗಳಿಂದ ಪಡೆದುಕೊಳ್ಳುವ ಅನುದಾನದ ಬಳಕೆಯ ಮೇಲ್ವಿಚಾರಣೆ.

2009 ರ ಶಿಕ್ಷಣ ಹಕ್ಕು ಕಾಯ್ದೆ ಶಾಲೆಗಳ ಮತ್ತು ಶಾಲಾ ಮಂಡಳಿಯ ಜವಾಬ್ದಾರಿ ಸಂಸ್ಥೆಯಾಗಿ ನಿಶ್ಚಯಿಸಲಾಗಿದೆ . ಕೇವಲ ದೂರದ ಕಚೇರಿಗಳ ಶೀಕ್ಷಕನಾಗದೆ ತಮ್ಮ ಶಾಲೆಯ ಸಣ್ಣ ಮಕ್ಕಳ ಕಲಿಕೆಯ ಜವಾಬ್ದಾರಿ ವಹಿಸಬೇಕು ವಿಕೆಂದ್ರೀಕರಣ ಕರಡು ಸ್ಥಳಿಯ ಪ್ರತಿನಿಧಿ ಸಂಸ್ಥೆಗಳು ಶಿಕ್ಷಕರೊಂದಿಗೆ ಅತಿಥಿಯಾಗಿ ಕೆಲಸ ಮಾಡಲು ಮತ್ತು ಅವರ ಸಾಮರ್ಥ್ಯ ಹೆಚ್ಚಿಸಲು ಸಹಾಯವಾಗುತ್ತದೆ.

ಶಿಕ್ಷಣ ಹಕ್ಕು ಕಾಯ್ದೆ 2009ರ ಅಡಿಯಲ್ಲಿ ಪ್ರತಿ ಶಾಲೆಯು ಶಾಲಾ ಅಭಿವೃದ್ದಿ ಸಮಿತಿಯನ್ನು ಸ್ಥಾಪಿಸಬೇಕು ಅದು ಶಾಲಾ ಅಭಿವೃದ್ದಿ ಯೋಜನೆಯ ಕಾರ್ಯ ನಿರ್ವಾಹಕ ಸಮಿತಿಯಾಗಿ ಕಾರ್ಯ ನಿರ್ವಹಿಸಬೇಕು. ಈ ಸಮಿತಿಯು ಶಾಲಾ ಆಡಳಿತದ ಬೋಧಕ ಮತ್ತು ಬೋದಕೇತರ ಸಿಬ್ಬಂದಿ ಮತ್ತು ಸಮುದಾಯದ ಸದಸ್ಯರನ್ನು ಹೊಂದಿರಬೇಕು. ಶಾಲಾ ಅಭಿವೃದ್ದಿ ಯೋಜನೆ ಒಂದು ಒಪ್ಪಿಕೊಂಡ ಅಥವಾ ಕರಾರು ಬದ್ದ ದಾಖಲೆ ಅದು ಮುಖ್ಯವಾಗಿ ಶಾಲಾ ನಾಯಕ ಮತ್ತು ಶಿಕ್ಷಕರಿಂದ ಅಭಿವೃದ್ಧಿ– ಯಾಗಬೇಕು ಪಾಲಕರು ಸಮುದಾಯ ಮತ್ತು ವಿದ್ಯಾರ್ಥಿಗಳಿಂದ ಸುವ್ಯವಸ್ಥಿತವಾದ ಒಳನೋಟಗಳನ್ನು ಅಳವಡಿಸಿಕೊಳ್ಳಬೇಕು.

## ಶಾಲಾ ಆಡಳಿತ ಮಂಡಳಿಯೊಂದಿಗೆ ಕಾರ್ಯ

ಶಾಲಾ ಆಡಳಿತ ಮಂಡಳಿ ಮತ್ತು ಶಾಲೆಯ ಸಿಂಬ್ಬಂದಿ ವೃದ್ದಿಸುವ ಪ್ರಮುಖ ಅಂಶವೆಂದರೆ ಸಹಬಾಗಿತ್ವ ಸಂಬಂದವು ಪರಸ್ಪರ ಅವಲಂಬಿತವಾಗಿರುತ್ತದೆ. ಶಾಲಾ ನಾಯಕನಾಗಿ ನೀವು ಆಡಳಿತಮಂಡಳಿಯೊಂದಿಗೆ ಉತ್ತಮ ಸಂಭದವನ್ನು ಹೊಂದಿರಬೇಕು. ಉತ್ತಮ ಸಂಬಂಧ ನಿರ್ವಹಿಸಲು ನೀವು:

1) ನಿತಂತರ ಸಂಪರ್ಕದಲ್ಲಿರಬೇಕು
2) ಯಶಸ್ಸನ್ನು ಸಂಭ್ರಮಿಸಲು ಶಾಲೆಗೆ ಆಹ್ವಾನಿಸಬೇಕು
3) ಅವರ ಸಲಹೆಗಳನ್ನು ಕಾಳಜಿ ಪೂರ್ವಕವಾಗಿ ಆಲಿಸಬೇಕು
4) ಪಠ್ಯ ಕ್ರಮವನ್ನು ಪರಿಣಾಮಕಾರಿಯಾಗಿಸಲು ಅವರ ಪರಿಣಿತಿಯನ್ನು ಉಪಯೋಗೀಸಬೇಕು.



**ಚಿತ್ರ 4 : ಶಾಲಾ ಆಡಳಿತ ಸಮಿತಿ ಸಭೆ.**

## ಚಟುಚಟಿಕೆ – 3: ಉತ್ಸಾಹಿ ಹುದ್ದೆ / ಸಾಧನ


ಶಾಲಾ ಆಡಳಿತ ಮಂಡಳಿ ಎಂದರೆ ನಂಬಿಕೆ ಪ್ರಾಮಾಣಿಕತೆ ಮತ್ತು ತೆರೆದ ಮನಸ್ಸಿನ ವಾತವರಣ ನಿರ್ಮಿಸವುದು. ಒಬ್ಬ ಶಾಲಾ ನಾಯಕ ಎದುರಿಸುವ ಗುರುತರ ಸವಾಲು ಎಂದರೆ ತನ್ನ ಎದುರಾಳಿ ಮತ್ತು ಸಂದರ್ಶಿಸುವ ಉತ್ಸಾಹಿ ಆಡಳಿತಗಾರರನ್ನು ಎದುರುಸುವುದು. ಈ ಕೆಳಗಿನ ಸಂಧರ್ಬದಲ್ಲಿ ಕುರಿತು ಯೋಚಿಸಿ ಮತ್ತು ನಿಮ್ಮ ಚಿಂತನೆಗಳನ್ನು ಕಲಿಕಾ ದಿನಚರಿಯಲ್ಲಿ ದಾಖಲಿಸಿ.

ಈಗಾಗಲೇ ಜವಾಬ್ದಾರಿಯುತ ವ್ಯಕಿಗಳು ಹಾಗು ಕೆಲವು ಸಿಬ್ಬಂದಿಯೊಂದಿಗೆ ಹಲವಾರು ಸಭೆಗಳನ್ನು ಮಾಡಿದ ಉತ್ಸಾಹಿ ಆಡಳಿತಗಾರ ಇದ್ದಾಗ ಹೆಚ್ಚಿನ ಜವಾಬ್ದಾರಿಯುತ ಸಹಪಠ್ಯ ಚಟುವಟಿಕೆಗಳನ್ನು ಕೊಟ್ಟಾಗ ಪಲಿತಾಂಶ ಸುಧಾರಿಸಲು ವಿಸ್ತ್ರತ ಯೋಜನೆ ತಯಾರಿಸಿ ಅದನ್ನು ಒಪ್ಪಿಕೊಳ್ಳುವಂತೆ ಸೂಚಿಸಿದಾಗ ನೀವು ಹೇಗೆ ಪ್ರತಿಕ್ರಿಯಿಸುವಿರಿ?

***ಚರ್ಚೆ*** :
ಧನಾತ್ಮಕ ರೀತಿಯಲ್ಲಿ ನೀವು ಆಡಳಿತಗಾರನ ಉತ್ಸಾಹ ಮತ್ತು ನಿಷ್ಠೆಯನ್ನು ಗುರುತಿಸಿ ಹೆಚ್ಚಿನ ಪಠ್ಯೇತರ ಚಟುವಟಿಕೆಗಳನ್ನು ಸುಧಾರಿಸುವ ನಿಟಿನಲ್ಲಿ ಧನಾತ್ಮಕವಾಗಿ ಯೋಚಿಸಬೇಕು. ನೀವು ಉತ್ತಮ ತಂಡದೊಂದಿಗೆ ಕೆಲಸ ಮಾಡುತ್ತ ಆಡಳಿತಗಾರರೊಂದಿಗೆ ಸಂಪರ್ಕದಲ್ಲಿರಬೇಕು ಇದರಿಂದ ಚಟುವಟಿಕೆಗಳ ಸಂಪೂರ್ಣ ಮಾಹಿತಿ ಇರಬೇಕು.

ಶಾಲಾ ಸುಧಾರಣೆ ಯೋಜನೆಯು ಇದಕ್ಕೆ ಸಹಾಯಕವಾಗುವುದು. ನೀವು ಆಡಳಿತಗಾತರರ ಗಮನವನ್ನು ಸೆಳೆಯಬೇಕು. ಶಾಲಾ ಅಭಿವೃದ್ದಿಯೋಜನೆ ಪಠ್ಯೇತರ ಚಟುವಟಿಕೆಗಳ ಪ್ರಗತಿಯನ್ನು ವಿಶ್ಲೇಷಿಸಬೇಕು ಶಾಲಾ ಆಡಳಿತಗಾರರನ್ನು ಕರೆದು ಅವರಿಗೆ ಶಾಲಾ ಅಭಿವೃದ್ದಿ ಸೂಚ್ಯಾಂಕವನ್ನು ವಿವರಿಸಬೇಕು.

# ಸಿಬ್ಬಂದಿಯೊಂದಿಗೆ ಕೆಲಸ



ದೃಶ್ಯ :– ಶಾಲಾ ನಾಯಕತ್ವ– ಮುಂದಾಳು ಶಿಕ್ಷಕರು

ಶಾಲಾ ಅಭಿವೃದ್ದಿ ಯೋಜನೆಯಲ್ಲಿ ಗುರುತಿಸಲ್ಪಟ್ಟ ಕ್ರಿಯೆಗಳನ್ನು ಮುನ್ನೆಡೆಸಿಕೊಂಡು ಹೋಗುವುದು ನಿಮ್ಮ ಮತ್ತು ನಿಮ್ಮ ಸಿಬ್ಬಂದಿಯ ಜವಾಬ್ದಾರಿಯಾಗಿದೆ. ನಿಮ್ಮ ಅಭಿಪ್ರಾಯದಂತೆ ಮಾಡುವುದು ತುಂಬಾ ಮಹತ್ವದ್ದು, ಆದರೆ ನೀವು ಇದನ್ನು ಖಾತ್ರಿ ಮಾಡಿಕೊಳ್ಳುವುದು ತುಂಬಾ ಅವಶ್ಯಕ ಎಕೆಂದರೆ ನಿಮ್ಮ ಶಿಕ್ಷಕರು ಅಭಿವೃದ್ಧಿ ಯೋಜನಾ ಕಾರ್ಯದಲ್ಲಿ ಸಕ್ರಿಯರಾಗಿದ್ದಾರೆ ಎಂದು 2ನೇ ಅಂಶದ ಅದ್ಯಯನದ ಪ್ರಕಾರೆ ಎಂಬುದನ್ನು ತಿಳಿಸುತ್ತದೆ. ಓರ್ವ ಶಿಕ್ಷಕರನ್ನು ನಿಲರ್ಕ್ಷ ಮಾಡಿದಾಗ ಮಿ.ಶಹಾ ರವರಿಗೆ ಏನು ಘಟಿಸಿತು ಎಂಬುದನ್ನು ಮುಂದಿನ ವ್ಯಕ್ತಿ ಅಧ್ಯಯನ ಪ್ರಕರಣದಲ್ಲಿ ಗಮನಿಸ ಬಹುದು.

## ವ್ಯಕ್ತಿ ಅಧ್ಯಯನ 2 ಮೀ॥ ಶಹಾ ರವರು ಕಟ್ಟುನಿಟ್ಟಿನ ದಾರಿ ಕ್ರಮಿಸಿದ್ದು,

ಮಿ ಶಹಾರವರು 8 ರಿಂದ 10ನೇ ತರಗತಿಗಳನ್ನು ಹೊಂದಿದ್ದ ಒಂದು ಶಾಲಾ ಶಿಕ್ಷಕ ನಾಯಕ. ಅವರು ಶಾಲಾ ಮೇಲುಸ್ತುವಾರಿ ಸಭೆಗೆ ಹಾಜರಾದದ್ದು.

ಶಾಲಾ ಅಭಿವೃದ್ದಿ ಯೋಜನೆಯ ಕುರಿತಾಗಿ ಚರ್ಚಿಸಲು ಕರೆದ ಶಾಲಾ ಮೇಲಸ್ತುವಾರಿ ಸಭೆಗೆ ಹಾಜರಾಗಲು ನಾನು ತುಂಬಾ (ನಿಸ್ತೇಜನಗಾದ್ದೇನು) ನಿಶಕ್ತನಾಗಿದ್ದೆನು. ನಾನು ಮತ್ತು ನನ್ನ ಉಳಿದ ಸಿಬ್ಬಂದಿ ಕೆಲವು ಹೊಚ್ಚ ಹೊಸ ವಿಶಿಷ್ಠ ಅಂಶಗಳ ಯೋಜನೆ ಕಂಡು ತುಂಬಾ ಭಾವೋದ್ವೇಗಗೊಂಡಿದ್ದೆವು. ನಿಖರವಾಗಿ ನಾವು ಒಂದು ಶೈಕ್ಷಣಿಕ ಅವಧಿಯಲ್ಲಿ ಎರಡು ಸಲ ವೇಳಾಪಟ್ಟಿಯ ಕಾರ್ಯವನ್ನು ಹೊರತು ಪಡಿಸಿ ವಿಶಿಷ್ಠ

ಪಠ್ಯಕ್ರಮ ದಿನವನ್ನಾಗಿ ಸಂಘಟಿಸಲು ಒಪ್ಪಿದೆವು. ಇದು ವಿದ್ಯಾರ್ಥಿಗಳಲ್ಲಿ ಯೋಜನೆಗಳನ್ನು ರೂಪಿಸಲು ಮಹತ್ವ ಪರಿಸರ ಅಧ್ಯಯನವನ್ನು ದಾಟಿ ಸಾಮಾಜಿಕ ವಿಷಯಗಳನ್ನು ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಬಹುತೇಕ ಪಠ್ಯ ಪುಸ್ತಕಗಳು ತಮ್ಮ ಹಿಂಬದಿಯಲ್ಲಿ ಕೆಲವು ಅಧ್ಯಾಯಗಳನ್ನು ಹೊಂದಿದ್ದು ಇವುಗಳ ಮಧ್ಯ ವಿಷಯಾಂತರವಾಗಿರುವುದನ್ನು ಗಮನಿಸಬಹುದು. ಈ ಯೋಜನೆಯಿಂದ ಹೆಚ್ಚಿನ ಸಮಯವನ್ನು ಹೇಗೆ ಉಳಿಸಿಕೊಳ್ಳುವುದೆಂದು ನಾವು ತಿಳಿದುಕೊಳ್ಳುತ್ತೇವೆ.

ಯೋಜನೇಯ ಒಂದು ಭಾಗಕ್ಕೆ ಬಂದಾಗ ಕೇಲವು ಪಾಲಕ ಪ್ರತಿನಿಧಿಗಳು ನಾವು ಕೇವಲ ಪ್ರಮುಖ ವಿಷಯಗಳ ಮೇಲೆ ಮಾತ್ರ ಕೇಂದ್ರೀಕೃತವಾದ ಅಂಶಗಳನ್ನು ಗಂಭೀರವಾಗಿ ವಾದಗಳ ಮೂಲಕ ಅಭಿವ್ಯಕ್ತಗೊಳಿಸುವುದು ಸಭೆಯ ಮಧ್ಯಮಾವಧಿಯಲ್ಲಿ ಆ ಪಾಲಕರ ಪೈಕಿ ಎರಡು ಮಕ್ಕಳು ಮಿ॥ ರಾಹುಲ ಸರ್ ವರ್ಗದಲ್ಲಿದ್ದರು. ಮಿ॥ ರಾಹುಲ ವಿಜ್ಞಾನ ಶಿಕ್ಷಕರಿದ್ದು ಈ ಬದಲಾವಣೆಯನ್ನು ವಿರೋಧಿಸಿದರು. ಸಿಬ್ಬಂದಿ ಸಭೆಯ ಹಿಂದಿನ ವಿಚಾರಗಳನ್ನು ಆಲೋಚಿಸುತ್ತಾ ಅವರು ಕೆಲವು ಉತ್ಸಾಹಿ ಶಿಕ್ಷಕರನ್ನು ದೂಷಿಸಿದ್ದು ಮತ್ತು ಅವನು ಪಾಲಕರನ್ನು ದೂಷಿಸುವ ಮೂಲಕ ಇಡೀ ಯೋಜನೆಯನ್ನು ಹಾಳು ಮಾಡಲು ಹೊರಟಿದ್ದಾನೆ ಎಂದು ಸಂಶಯ ಮೂಡಿತು.

ಅದು ತುಂಬಾ ಜಟಿಲವಾದ ಸಭೆಯಾಗಿದ್ದು ಕೊನೆಯಲ್ಲಿ ಒಂದು ದೀರ್ಘವಾದ ಯೋಜನೆಯನ್ನು ಅಡ್ಡ ಪಠ್ಯಕ್ರಮ ದಿನ ಹೇಗೆ ಕೆಲಸ ನಿರ್ವಹಿಸುತ್ತದೆ ಹಾಗೂ ಯಾವ ರೀತಿಯಾಗಿ ಕಲಿಕೆಗೆ ಆಧಾರವಾಗಿ ಸರಳವಾದ ಮತ್ತು ಸುಲಭವಾದ ಅಂಶಗಳನ್ನು ಪ್ರದರ್ಶಿಸುತ್ತದೆ ಅದನ್ನು ಕಾರ್ಯರೂಪದಲ್ಲಿ ತರಲು ನಾನು ಮಿ॥ ರಾಹುಲ್‌ಗೆ ಸಹಾಯ ಮಾಡಲು ನಿರ್ಧರಿಸಿದೆನು


ಈ ಸಮಗ್ರ ಘಟನೆ ನಿಕೃಷ್ಠ ಮಾಡಿದ ಮತ್ತು ತುಂಬಾ ಅಲ್ಪವೆಂದು ವಾದಿಸಿದ ಜನ ಹೇಗೆ ಸಮಸ್ಯೆಗಳನ್ನು ಸೃಷ್ಠಿಸುತ್ತಾರೆ ಎಂಬುದನ್ನು ಅರಿತುಕೊಂಡನು. ಮಿ॥ ರಾಹುಲನಿಗೆ ಸಂಬಂಧಿಸಿದ ವಿಷಯವನ್ನು ಸಿಬ್ಬಂದಿ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಿ ಅವನನ್ನು ಸರಿದಾರಿಗೆ ತರಲು ಖಂಡಿತವಾಗಿ ಅವನೊಂದಿಗೆ ಮಾತನಾಡಲು ನಿರ್ಧರಿಸಿದೆನು.

ಶಾಲಾ ನಾಯಕರಾಗಿ ನೀವು ನಿರಂತರ ಸಿಬ್ಬಂದಿ ಸಭೆಗಳನ್ನು ನಡೆಸುತ್ತೀರಿ. ಆಡಳಿತ ನಡೆಸುವದಕ್ಕಿಂತಲೂ ವಿಷಯಗಳನ್ನು ಚರ್ಚಿಸಲು ಸಮಯ ನೀಡುವುದೇ ನಿಮ್ಮ ಮುಂದೆ ಇರುವ ಒಂದು ದೊಡ್ಡ ಸವಾಲು. ಮುಂಚಿತವಾಗಿ ಯೋಜನೆಯನ್ನು ಕಾಲ ಮಿತಿಯೊಳಗೆ ಶಾಲಾ ಅಭಿವೃದಿ ಯೋಜನೆಯನ್ನು ಸಿದ್ದಪಡಿಸಿಕೊಳ್ಳುವುದು ಉತ್ತಮವಾದ ವಿಧಾನ.

## ಪಾಲಕರೊಂದಿಗೆ ಕಾರ್ಯಯೋಜನೆ

ಒಂದು ವೇಳೆ ನೀವು ಪಾಲಕರ ಬೆಂಬಲ ಪಡೆದುಕೊಂಡಲ್ಲಿ ಅವರೆ ನಿಮ್ಮ ಶಾಲೆ ನಿಜವಾದ ಆಸ್ತಿ. ಶಾಲಾ ಅಭಿವೃದ್ದಿ ಯೋಜನೆಯು ನಿಮ್ಮ ಮತ್ತು ನಿಮ್ಮ ಸಿಬ್ಬಂದಿಯಿಂದ ಮುನ್ನೆಡೆಯಬಹುದು, ಆದರೆ ಪಾಲಕರು ಆ ಒಂದು ವಿಧಾನದಲ್ಲಿ ತೊಡಗಿಕೊಳ್ಳುವುದರ ಜೊತೆಗೆ ಸ್ವಾವಲೋಕನ ಮತ್ತು ಚರ್ಚೆಗೆ ಆದ್ಯತೆ ನೀಡಬಹುದು.

ಕೆಲವೊಂದು ಸಲ ಪಾಲಕರು ರಾಜಕೀಯ ಅಂಶಗಳನ್ನು ಶಾಲೆಯಲ್ಲಿ ತಂದು ಸೇರಿಸಲು ಪ್ರಯತ್ನಿಸಬಹುದು. ಕೆಲವು ಸಮುದಾಯಗಳಲ್ಲಿ ಪಾಲಕರ ಗುಂಪುಗಳು ಶಾಲಾ ಸುದಾರಣೆಗಿಂತಲೂ ತಮ್ಮ ವ್ಯಕ್ತಿಗತ ಪ್ರತಿಷ್ಠೆಯನ್ನು ದೊಡ್ಡದಾಗಿಸಿಕೊಳ್ಳ ಬಹುದು ಇಂಥಹ ಸಮಯದಲ್ಲಿ ಶಾಲಾ ನಾಯಕರು ಸದಾ ಜಾಗೃತರಾಗಿದ್ದು ಶಾಲಾ ನಾಯಕತ್ವದ ಕೌಶಲ್ಯಗಳನ್ನು ಬಳಸಿ ಚುನಾಯಿತ ಪ್ರತಿನಿದಿಗಳು ಮತ್ತು ಸ್ಥಳಿಯ ಸಮೂದಾಯದೊಂದಿಗೆ ಸೇರಿ ಉತ್ತಮ ಪಲಿತಾಂಶದ ಹಾದಿಯನ್ನು ಹುಡುಕಬೇಕು ಅಥವಾ ಕಾಣಬೇಕು



**ದೃಶ್ಯಾವಳಿ–ಶಾಲಾ ನಾಯಕತ್ವ –ಪಾಲಕರನ್ನು ತೊಡಗಿಸಿಕೊಳ್ಳವಿಕೆ**

## ವ್ಯಕ್ತಿ ಅಧ್ಯಯನ ಅಂಶ : 3 ಮಿ॥ ಮೇಘನಾಥ ಶಾಲಾ ಮೇಲಸ್ತುವಾರಿ ಸಮಿತಿಯನ್ನು ಬೇಟಿ ಮಾಡುವುದು

ಮಿ॥ ಮೇಘನಾಥ ಒಂದುಚಿಕ್ಕ ಪ್ರೌಢ ಶಾಲೆಯ ಶಾಲಾ ನಾಯಕ. ಶಾಲಾ ಮೇಲಸ್ತುವಾರಿಯಲ್ಲಿ ಐದುಜನ ಪಾಲಕ ಪ್ರತಿನಿಧಿಗಳಿದ್ದಾರೆ. ಎಸ್‌ಎಮ್ ಸಿ ಯೊಂದಿಗೆ ಸಭೆಯ ಕುರಿತು ಅವರು ಚರ್ಚಿಸುತ್ತಾರೆ

ನಾನೊಂದು ಉತ್ತಮವಾದ ಪ್ರಗತಿದಾಯಕ ಶಾಲೆಯನ್ನು ನಡೆಸುತ್ತೇನೆ. ನಮ್ಮಲ್ಲಿ ಇಬ್ಬರು ಒಳ್ಳೆಯ ವಿದ್ಯಾರ್ಹತೆ ಹೊಂದಿದ ಗಣಿತ ಮತ್ತು ವಿಜ್ಞಾನ ಶಿಕ್ಷಕರಿದ್ದಾರೆ. ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ವಿಜ್ಞಾನ ಮತ್ತು ಇಂಜನಿಯರಿಂಗ್ ಅಧ್ಯಯನ ಮಾಡುವಂತೆ ಹುರುದುಂಬಿಸಲು ನಿರ್ಧರಿಸಿದ್ದೇವೆ. ಎಲ್ಲಾ ಎಂಟನೆಯ ವರ್ಗದ ವಿದ್ಯಾರ್ಥಿನಿಯರು ಅತ್ಯಂತ ಉತ್ಸುಕತೆಯಿಂದ ತಮ್ಮ ಕೆಲಸವನ್ನು ನಿರ್ವಹಿಸುವದರೊಂದಿಗೆ ತುಂಬಾ ಆಸಕ್ತಿಯಿಂದ ಉಪಯುಕ್ತ ವಸ್ತುಗಳನ್ನು ಸಿದ್ದ ಪಡಿಸುವಲ್ಲಿ ತುಂಬಾ ಕ್ರೀಯಾಶೀಲತೆಯನ್ನು ವ್ಯಕ್ತಪಡಿಸುವುದನ್ನು ಸಾಬೀತುಪಡಿಸುವುದು / ಹುರಿದುಂಬಿಸುವುದೇ ನಮ್ಮ ಉದ್ದೇಶವಾಗಿತ್ತು.

ಎಸ್‌ಎಮ್ ಸಿ ಸಭೆಯಲ್ಲಿ ಕೆಲವು ಹೊಸ ಮುಖಗಳು ಕಾಣಿಸಿ ಕೊಂಡವು ಏಕೆಂದರೆ 5ಜನ ಪಾಲಕ ಪ್ರತಿನಿಧಿಗಳಾಗಿ ಚುನಾವಣೆ ನಡೆದಿತ್ತು ಅಧ್ಯಕ್ಷರು ಸಭೆಯಲ್ಲಿ ಕರಕುಶಲ ವಸ್ತುಗಳ ಕುರಿತಾದ ವಿಷಯದ ಮಾತನಾಡಿದರು. ನಾವು ಈ ವಿಷಯವನ್ನು ಚರ್ಚೆಗೆ ಎತ್ತಿಕೊಂಡಾಗ ಓರ್ವ ಪಾಲಕ ಪ್ರತಿನಿಧಿ ವಿದ್ಯಾರ್ಥಿನಿಯರಿಗೆ (ಬಡಿಗಡ ಕೆಲಸ) ಕಟ್ಟಿಗೆ ಕೆಲಸ ಮತ್ತು ತಾಂತ್ರಿಕ ಶಿಕ್ಷಣ ಯೋಗ್ಯವಲ್ಲ ಅದರಂತೆ ವಿದ್ಯಾಋಇರ್ಗಳಿಗೆ ಅಡಿಗೆ ಕೆಲಸ ಅಥವಾ

ಹೊಲಿಗೆ ಅವಶ್ಯಕತೆಯಿಲ್ಲ ಎಂದು ವಿವರಿಸಿದನ್ನು ಕರಕುಶಲ ವಿಷಯಗಳಿಗಾಗಿ ವಿದ್ಯಾಥಿಗಳನ್ನು ಪ್ರತ್ಯೇಕಿಸಲಾಗಿದೆ ಈ ಅಂಶ ಪಠ್ಯಕ್ರಮದಲ್ಲಿದೆ ಎಂದು ತಿಳಿಸಿದನು.

ಚರ್ಚೆಗಂಭೀರ ಸ್ವರೂಪ ತಾಳಿತು. ನಿರ್ಣಯಕ್ಕಾಗಿ ಹಲವಾರು ಜನ ಕಾತುರರಾಗಿದ್ದರು ಮೂಲತಹ ಈ ವಿಚಾರವನ್ನು ಪ್ರಸ್ತಾಪಿಸಿದ ಕೆಲವರು ತಮ್ಮ ನಿರ್ಧಾರವನ್ನು ಬದಲಾಯಿಸುವುದು ಗಮನಕ್ಕೆ ಬಂತು. ಈ ವಿಚಾರ ನಿಗದಿತ ಚರ್ಚಾ ವಿಷಯ ಆಗಿಲ್ಲವಾದರಿಂದ ನಾನು ಹೆಚ್ಚು ಈ ಬಗ್ಗೆ ಗಮನ ಹರಿಸಲಿಲ್ಲ, ಸಮಿತಿಯ ಸದಸ್ಯರೆ ಮುಂಚಿತವಾಗಿ ನಿರ್ಧಾರಕ್ಕೆ ಬಂದಿದ್ದರು ಅಧ್ಯಕ್ಷರೆ ಈ ವಿಷಯದ ಕುರಿತು ಚರ್ಚಿಸುವುದಾಗಿ ತಿಳಿಸಿದರು ಮುಂದಿನ ಕೆಲವು ವಾರಗಳಲ್ಲಿ ಎಂಟನೇಯ ವರ್ಗದ ವಿದ್ಯಾರ್ಥಿಗಳಿಗಾಗಿ ಒಂದು ಮುಕ್ತ ಸಂಜೆಯನ್ನು ಸಂಘಟಿಸಿ ಏಕೇ ವಿದ್ಯಾರ್ಥಿನಿಯರು ಹಾಗೂ ವಿದ್ಯಾರ್ಥಿಗಳು ಪರಸ್ಪರ ವಿರೋಧಾಬಾಸಾದ ಕಾರ್ಯಗಳಲ್ಲಿ ತೊಡಗಿ ಕೊಳ್ಳುವ ಕೌಶಲ್ಯ ಕುರಿತು ಬಂದಿರುವ ಜನರೊಂದಿಗೆ ಮಾತನಾಡಿದೆನು. ಪಠ್ಯ ಪುಸ್ತಕದಲ್ಲಿರುವ ಕೇಲವು ಛಾಯಾ ಚಿತ್ರಗಳನ್ನು ಪ್ರದರ್ಶಿಸಿದೇನು. ಪಾಲಕರು ಶಾಲೆಗೆ ಬಂದು ವೀಕ್ಷಣೆ ಮಾಡಲು ಆಮಂತ್ರಿಸಿದೆನು. ನನ್ನ ಹೋರಾಟ ಯಶ್ವಸ್ವಿಯಾಯಿತು ಮತ್ತು ಮುಂದಿನ ಸಭೆಯಲ್ಲಿ ಸಮಿತಿಯ ಸದಸ್ಯರು ಚರ್ಚೆಯ ವಿರುದ್ದವಾಗಿ ಮತ ಚಲಾಯಿಸಿದರು.

*ಯೋಜನೆಗೆ ತಡೆ*

- ಅಂಶದ ಅದ್ಯಯನಕ್ಕೆ ನಿಮ್ಮ ಪ್ರತಿಕ್ರಿಯೆ ಏನು?
- ನಿಮ್ಮ ಸ್ವಂತ ಶಾಲಾ ಮೇಲಸ್ತೂವಾರಿ ಸಮಿತಿಯನ್ನು ಆಲೋಚಿಸಿ ? ಅವರಿಗೆ ಮನವರಿಕೆಯಾಗುವಂತೆ ಮಾಡಲು ನೀವೇನು ಮಾಡುವಿರಿ.
- ನಿಮ್ಮ ಶಾಲಾ ಮೆಲುಸ್ತುವಾರಿ ಸಮಿತಿ ಏನಾದರು ಕಠಿಣ ವ್ಯಕ್ತಿತ್ವವನ್ನು ಹೊಂದಿದವರು ಇದ್ದಾರೆಯೇ? ಹಾಗಿದ್ದಲ್ಲಿ ನೀವು ಅವರೊಂದಿಗೆ ಹೇಗೆ ಕಾರ್ಯ ನಿರ್ವಹಿಸುತ್ತೀರಿ.

ಎಸ್ ಎಮ್ ಸಿ ಸಂವಹನವೆ ಪ್ರಮುಖ ಅಂಶ. ಶಾಲೆಯಲ್ಲಿ ಏನು ನಡೆಯುತ್ತದೆ ಎಂಬುದನ್ನು ಪಾಲಕರಿಗೆ ತಿಳಿಸಿದಾಗ ಅದು ಅವರ ಸಾಮರ್ಥ್ಯ ಮತ್ತು ಕುತೂಹಲತೆಯನ್ನು ಹೆಚ್ಚಿಸುತ್ತದೆ ಅವರೇ ನಿಮ್ಮ ಗುರಿಗಳನ್ನು ಮತ್ತು ಆದ್ಯತೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ.

## ಶಾಲಾಭಿವೃದ್ಧಿ ಯೋಜನೆಗೆ ಮಕ್ಕಳ ಕೊಡುಗೆ

ಬೋಧನೆ ಹಾಗೂ ಕಲಿಕಾ ವಿಧಾನವನ್ನು ಹೊರತುಪಡಿಸಿ ಮಕ್ಕಳು ಶಾಲಾ ಜೀವನದ ಬಹುತೇಕ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಆಸ್ತಿಯನ್ನು ಹೊಂದಿರುತ್ತಾರೆ. ಅವರನ್ನು ಸ್ವಾವಲೋಕನದಲ್ಲಿ ತೊಡಗಿಸುವದು, ನಿಮ್ಮ ಪಾಲಿಗೂ ಹಾಗೂ ಅವರ ಮಟ್ಟಿಗೂ ಅದು ತುಂಬಾ ಹೊಸ ಧೋರಣೆಯೇ ಸರಿ. ಹೀಗಿದ್ದಾಗ್ಯೂ ಅವರ ಅಭಿಪ್ರಾಯಗಳು ಉತ್ತಮ ಶಾಲಾ ಯೋಜನೆ ಹೊರಬರಲು ಸಹಕಾರಿಯಾಗಿರುತ್ತದೆ. ಇದನ್ನು ಸಾಧಿಸಲು ನಿಮ್ಮ ಮಕ್ಕಳಿಗೆ ಸಹಕಾರಿಯಾಗಿತ್ತದೆ ಇದನ್ನು ಸಾಧಿಸಲು ನೀವು ಮಕ್ಕಳನ್ನು ನಿಮ್ಮೊಂದಿಗೆ ಕರೆದುಕೊಂಡು ಶಾಲೆಯ ಸುತ್ತಲೂ ಪರಿಕ್ರಮ ಮಾಡುತ್ತಾ ಶಾಲಾ ಜೀವನದ ವಿಚಾರಗಳ ಕುರಿತು ಸಮಾಲೋಚಿಸುತ್ತಾ ಹೋಗಬೇಕು.

ಹೇಗೆ ನೀವು ಅವರೊಂದಿಗೆ ಸಹಭಾಗಿತ್ವದ ವಿಧಾನ ಮೂಲಕ ಕಲಿಸುತ್ತಾ ಹೋಗುವಿರೋ ಅಲ್ಲಿ ಶಿಕ್ಷಕರು ಮತ್ತು ಮಕ್ಕಳ ನಡುವಿನ ಸಂಬಂಧ ತುಂಬಾ ಪ್ರಜಾತಂತ್ರವಾಗುತ್ತಾ ಸಾಗುವದು ಮಕ್ಕಳು ಹೆಚ್ಚಿನ ಆತ್ಮವಿಶ್ವಾಸದೊಂದಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಅವರಿಗೆ ನೀವು ಒಂದು ಶಾಲಾ ಸಂಸತ್ತನ್ನು ರಚಿಸಿಕೊಟ್ಟು ಆ ಮೂಲ ಶಾಲಾ ಜೀವನದ ಅಂಶಗಳ ಕುರಿತು ಚರ್ಚಿಸಲು ಒಂದು ವೇಡಿಕೆ ಕಲ್ಪಿಸಿಕೊಡಿ.

# 3 ಶಾಲಾಭಿವೃದ್ಧಿ ಯೋಜನೆಗಾಗಿ

ಬರವಣಿಗೆ ಮತ್ತು ನಿರ್ವಹಣೆ (ಅಮೇರಿಕನ ಭಾರತ ಸಂಸ್ಥಾಪನೆ 2011 ) ಈ ಕೆಳಗೆ ಶಾಲಾಭಿವೃದ್ಧಿ ಯೋಜನೆಗಾಗಿ ಕೆಲವು ಸಾಮಾನ್ಯ ಮಾರ್ಗಸೂಚಿ ಅಂಶಗಳನ್ನು ಕೊಡಲಾಗಿದೆ.

- ಪ್ರತಿ ಶಾಲೆಯಲ್ಲಿ ಒಂದು ಶಾಲಾಭಿವೃದ್ಧಿ ಯೋಜನೆ ಇರಲೇಬೇಕು
- ಶಾಲಾಭಿವೃದ್ಧಿ ಯೋಜನೆಯು ಶಾಲಾ ಮೇಲುಸ್ತುವಾರಿ ಸಮಿತಿ ಉಪಸಮಿತಿಯಿಂದ ರೂಪಿಸಲ್ಪಟ್ಟಿರಬೇಕು.
- ಮೂರು ವರ್ಷದ ಒಂದು ಯೋಜನೆಯೊಂದಿಗೆ ವಿಸ್ತೃತವಾದ ವಾರ್ಷಿಕ ಯೋಜನೆ ಸಿದ್ದಪಡಿಸಬೇಕು.
- ಸಿದ್ಧಪಡಿಸಿದ ಯೋಜನೆಯನ್ನು ಸಂಬಂಧಿಸಿದ ರಾಜ್ಯದ ಅಧಿಕಾರಿಗಳಿಗೆ ಸೂಚಿತ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕು ಇದು ಮುಂಚಿತವಾಗಿಯೇ ಕಳುಹಿಸಲ್ಪಟ್ಟ ವಿಭಾಗ ಮಟ್ಟ (Cluster) ಕ್ಷೇತ್ರ ಮಟ್ಟ (Block) ಮತ್ತು ಅಂತಿಮವಾಗಿ ಜಿಲ್ಲಾ ಮಟ್ಟವನ್ನು ಭಾರತ ಸರಕಾರಕ್ಕೆ ತಲುಪುವ ಮೊದಲೇ ತಲುಪಬೇಕು
- ಸಿದ್ಧಪಡಿಸಿದ ಯೋಜನೆಯು ಯಾವುದೇ ನಿಧಿಯನ್ನು ಅಪೇಕ್ಷಿಸುವಂತಿರಬಾರದು ಹಾಗೂ ಸಮುದಾಯಕ್ಕೆ ಅನುಕೂಲಕರವಾದ ಕಾರ್ಯಚಟುವಟಿಕೆ ಇದು ಒಳಗೊಂಡಿರಬೇಕು

ಶಾಲಾಭಿವೃದ್ಧಿ ಯೋಜನೆಯು (ಎಸ್ ಡಿ ಪಿ) ಒಂದು ಸಾರ್ವಜನಿಕ ಯೋಜನೆಯಾಗಿದ್ದು ಸುಲಭವಾಗಿ ತಲುಪಬಹುದಾದ



ಚಿತ್ರ 5 : ಒಂದು ಯಶಸ್ವಿ ಎಸ್.ಡಿ.ಪಿ (ಶಾಲಾ ಅಭಿವೃದ್ಧಿ ಯೋಜನೆ) ಗೆ ಸಹಯೋಗದ ಅಗತ್ಯವಿರುತ್ತದೆ.

ಗುರಿಗಳನ್ನು ಮಾತ್ರ ಮುನ್ನಡಿಸಕೊಂಡು ಹೋಗಬೇಕು ಹೊರತಾಗಿ ಕಾರ್ಯರೂಪದಲ್ಲಿ ಬಾರದಿರುವ ಸುಳ್ಳು ಸುದ್ದಿಗಳನ್ನು ಮಾತ್ರ ಹೊಂದಿರಬಾರದು.

ಸಂಪನ್ಮೂಲ ಒಂದಲ್ಲಿ ಸೂಚಿಸಿರುವ ಅಂಶಗಳು ಇಲ್ಲಿ ಸಹಾಯ ಮಾಡುತ್ತವೆ ಹಾಗೂ ನಿಮ್ಮ ಉದ್ದೇಶಗಳನ್ನು ಸಫಲಗೊಳಿಸಲು ಸ್ಪೂರ್ತಿ ನೀಡುತ್ತವೆ ಈ ಕೆಳಗೆ ಯೋಜನೆಯ ಆರು ಪ್ರಮುಖ ಅಂಶಗಳನ್ನು ಕೊಡಲಾಗಿದೆ.

1. **ಪ್ರಮುಖ ಆದ್ಯತಾ ವಲಯ :** ಇವು ಶಾಲೆಯ ಸಮೂಹಿಕ ದೃಷ್ಟಿಕೋನವನ್ನು ಪ್ರತಿಫಲಿಸುತ್ತವೆ ಹಾಗೂ ಸಿಬ್ಬಂದಿ ಮತ್ತು ಮೇಲುಸ್ತುವಾರಿ ಸಮಿತಿಯ ಒಪ್ಪಿಗೆಯನ್ನು ಅವಶ್ಯಾನುಸಾರ ಪಡೆಯುತ್ತವೆ ಸ್ವಾವಲೋಕನ ದಾಖಲೆಯು ಈ ಚರ್ಚೆಗಳಿಗೆ ಸಾಕ್ಷಾಧಾರಗಳನ್ನು ದೊರಕಿಸಿಕೊಡುತ್ತದೆ ನೀವು ಸಾಧಿಸಬಯಸುವ ಯಾವುದಾದರೂ ಅಂಶಗಳಿಗೆ ಸ್ಪಷ್ಟತೆಯನ್ನು ನೀಡಿ ಆದ್ಯತೆ ಕೊಡಲು ಅನುವು ಮಾಡುತ್ತದೆ.
2. **ಕ್ರಿಯೆಗಳು :** ಈ ಭಾಗವನ್ನು ಪೂರ್ತಿಗೊಳುಸುವದು ನಿಮ್ಮ ಮತ್ತು ಸಿಬ್ಬಂದಿಯ ಅವಶ್ಯಕತೆ ಆಗಿರುತ್ತದೆ ಇದನ್ನು ಹೇಗೆ ನಿರ್ವಹಿಸುವಿರಿ ಎಂಬುದು ನಿಮ್ಮ ನಾಯಕತ್ವನ್ನು ಅಬಲಂಬಿಸಿದೆ ಕೆಲವು ಅಂಶಗಳಿಗೆ ಇದು ಸಹಕಾರಿಯಾಗಿದ್ದು ಅದು ನಿಮ್ಮ ಶಿಕ್ಷಕರಿಗೆ ನಿರ್ದಿಷ್ಟವಾದ ತಮ್ಮ ಕ್ರಿಯೆಯನ್ನು ಹಮ್ಮಿಕೊಳ್ಳಲು ಸಹಕರಿಬಹುದು ಹಾಗೂ ಅದು ನಿಮಗೂ ಕ್ರಿಯೆಯನ್ನು ಒಪ್ಪಿಕೊಳ್ಳಲು ಸಹಾಯಮಾಡಬಹುದು.
3. ಕ್ರಿಯೆಯನ್ನು ಜರುಗಿಸಿ ಪೂರ್ಣಗೊಳಿಸುವ ಜವಾಬ್ದಾರಿ ಯಾರಿಗೆ ಇದು ಜನರ ಅಭಿಪ್ರಾಯಕ್ಕೆ ಬಿಟ್ಟುಕೊಟ್ಟದ್ದು.
4. **ಕ್ರಿಯಾಯೋಜನೆಗೆ ಕಾಲಮಿತಿ** : ಭಾಗ 3 ರಲ್ಲಿ ಸೂಚಿಸಿದಂತೆ ವ್ಯಕ್ತಿಗತವಾಗಿ ಅವರ ಮೇಲೆ ಪರಿಣಾಮ ಬೀರುತ್ತದೆ ಯಾವುದೇ ನಿಧಾನತೆ ಎಸ್ ಎಂ ಸಿ ಯ ಗಮನಕ್ಕೆ ತರಬೇಕಾಗುತ್ತದೆ.
5. **ಅವಶ್ಯಕ ಸಂಪನ್ಮೂಲಗಳು :** ಅವಶ್ಯಕ ಸಂಪನ್ಮೂಲಗಳ ಲಭ್ಯವಾಗದಿದ್ದಲ್ಲಿ ಯೋಜನೆಯು ತುಂಬಾ ಅಪಾಯಕಾರಿ ಯೋಜನೆ ರೂಪಿಸುವ ಪೂರ್ವದಲ್ಲಿಯೇ ಸಂಪನ್ಮೂಲಗಳ ಪಟ್ಟಿಮಾಡಿಕೊಂಡು ಯೋಜನೆ ರೂಪಿಸಬೇಕು.
6. **ಯೋಜನೆಯ ನೇತೃತ್ವ ವಹಿಸುವಿಕೆ :** ಇದು ನಿಮಗೆ ಹೇಗೆ ಯೋಜನೆ ರೂಪಿತಗೊಂಡಿದೆ ಮತ್ತು ಯೋಜನೆ ಯಾವ ರೀತಿ ಕಾರ್ಯೋನ್ಮುಖವಾಗಿದೆ ಎಂಬುದನ್ನು ಅರಿಯಲು ಸ್ಪೂರ್ತಿದಾಯಕವಾಗಿದೆ ಈ ಭಾಗದಲ್ಲಿ ಗುರುತಿಸಲಾದ ಚಟುವಟಿಕೆಗಳು ಮುಂದಿನ ಸುತ್ತಿನ ಸ್ವಾವಲೋಕನಕ್ಕೆ ಅವಕಾಶ ಮಾಡಿಕೊಡುತ್ತವೆ.

ಒಮ್ಮೆ ಯೋಜನೆ ಪೂರ್ಣಗೊಂಡರೆ ಮತ್ತು ಶಾಲಾ ಮೇಲುಸ್ತುವಾರಿಯಿಂದ ಸಮ್ಮತಿಸಲ್ಪಟ್ಟತೆ ನೀವು ನಿರಂತರ ಈ ಕುರಿತು ಪ್ರಗತಿಯ ವರದಿಯನ್ನು ಸಲ್ಲಿಸುತ್ತಿರಬೇಕು.

ಬಹುತರವಾಗಿ ಇದು ಕೇವಲ ಯೋಜನೆಯಲ್ಲ ಆದರೆ ಒಂದು ಮಹತ್ವದ ವಿಧಾನ ಯೋಜನೆಯು ನಿಮಗೆ ಹಾಗೂ ನಿಮ್ಮ ಶಿಕ್ಷಕರಿಗೆ ಏನು ಮಾಡುತ್ತಿದ್ದೇವೆ ಎಂಬುದನ್ನು ಅರಿಯಲು ಸ್ಪಷ್ಟ ರಚನಾತ್ಮಕ ಸಂಭಾಷಣೆಯನ್ನು ರೂಪಿಸಲು ಸಹಕರಿಸುತ್ತದೆ ಇದು ನಿಮ್ಮೊಂದಿಗೆ ಸಮುದಾಯವೂ ಸಹ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಖಾತ್ರಿ ಮಾಡಿಕೊಡುತ್ತದೆ ಒಂದು ವೇಳೆ ಯಾರಾದರೂ ನಿಮ್ಮ ಯೋಜನೆಯನ್ನು ಷರತ್ತು ಬದ್ಧಗೊಳಿಸಿದರೆ ಆಗ ಅದನ್ನು ಶಾಲಾ ಮೇಲುಸ್ತುವಾರಿಯ ಮೂಲಕ ಜಾರಿಗೊಳಿಸಬಹುದಾಗಿದೆ.  ಸಹಜವಾಗಿ, ಇದು ಹೆಚ್ಚು ಮಹತ್ವಪೂರ್ಣವಾದ ಯೋಜನೆಯಲ್ಲ.

### ಚಟುವಟಿಕೆ 4: ಟಿಪ್ಪಣಿಗಳೊಂದಿಗೆ ಕಾರ್ಯವಿಧಾನ

ಇದನ್ನು ನೀವು ನಿಮ್ಮ ಸಹಾಯಕ ಶಿಕ್ಷಕರು, ಹಿರಿಯ ಶಿಕ್ಷಕರು ಅಥವಾ ಮತ್ತೋರ್ವ ನಾಯಕರೊಂದಿಗೆ ಸೇರಿ ನಿರ್ವಹಿಸಬಹುದಾಗಿದೆ.

ನಿಮ್ಮ ಶಾಲೆಯಲ್ಲಿ ಹೇಗೆ ಇದನ್ನು ನಿರ್ವಹಿಸಬೇಕು ಎನ್ನುವ ತಂತ್ರವನ್ನು ನೀವು ಹೊಂದಿರಬೇಕು, ಖಾಲಿ ತಂತ್ರ ಟಿಪ್ಪಣಿಗಳು ಸಂಪನ್ಮೂಲ 1

ರಲ್ಲಿ ತೋರಿಸಿದಂತೆ ನೀಡಿ ಅವುಗಳನ್ನು ಪೂರ್ಣಗೊಳಿಸಲು ಹೇಳಬೇಕು.

- ❖ ಕಾರ್ಯ ಯೋಜನೆಯ ಮೇಲೆ ಬೆಳಕು ಚೆಲ್ಲುವದು.
- ❖ ಕಾರ್ಯ ನಿರ್ವಹಿಸಲು ಕಠಿಣವೇ
- ❖ ಟಿಪ್ಪಣಿಗಳನ್ನು ನಿಮ್ಮ ಯೋಜನೆಯನ್ನು ರೂಪಿಸಲು ಸಹಾಯ ಮಾಡುತ್ತವೆಯೇ

ನಿಮ್ಮ ಶಾಲಾ ಮೇಲುಸ್ತುವಾರಿ ಅಧ್ಯಕ್ಷರು ಹೇಗೆ ಇದಕ್ಕೆ ಪ್ರತಿಕ್ರಿಯಿಸುತ್ತಾರೆ ಎಂದು ಯೋಜನೆ ಮಾಡಿದ್ದೀರಾ

(ದಿನಚರಿಯ ಎಲ್ಲ ಪ್ರತಿಕ್ರಿಯೆಯನ್ನು ಟಿಪ್ಪಣಿ ಮಾಡಿ)

# 4 ಒಟ್ಟಾರೆ ಅಭಿಪ್ರಾಯ

ಈ ಘಟಕವು ಹೇಗೆ ಶಾಲಾಭಿವೃದ್ಧಿ ಯೋಜನೆಗೆ ಮಾರ್ಗದರ್ಶನವನ್ನು ಆ ವರ್ಷ ಹಾಗೂ ಅದರಾಚೆ ನೀಡುತ್ತದೆ ಎಂಬುದನ್ನು ವಿವರಿಸುತ್ತದೆ. ಇದೊಂದು ಸಮರ್ಥವಾದ ಸಲಕರಣೆಯಂತಿದ್ದು ಶಾಲೆಯ ಅಭಿವೃದ್ಧಿಗಾಗಿ ಶೈಕ್ಷಣಿಕ ಮಂಡಳಿಯೊಂದಿಗೆ ಸಂವಹನ ಮಾಡಲು ಸಹಕರಿಸುತ್ತದೆ. ಸಂಪನ್ಮೂಲ 1 ರಲ್ಲಿ ಸೂಚಿತ ಟಿಪ್ಪಣಿಗಳು ನಿಮಗೆ ಸಹಕಾರಿಯಾಗಿದ್ದು ನಿಮ್ಮ ಯೋಜನೆಗೆ ಪೂರಕವಾಗಿವೆ ಆದರೆ ಇದುವೇ ಅಂತಿಮವಲ್ಲ.

ನಿಮ್ಮ ಶಾಲಾಭಿವೃದ್ಧಿ ಯೋಜನೆಯು, ಸಮುದಾಯದ ಸಹಭಾಗಿತ್ವ, ಜವಾಬ್ದಾರಿ ಹಂಚಿಕೆಯನ್ನು ಶಾಲೆ ಮತ್ತು ಸಮುದಾಯದ ಮಧ್ಯ ಏರ್ಪಡಿಸುತ್ತದೆ ಆಡಳಿತ ಮತ್ತು ಲೆಕ್ಕಪತ್ರ ಯೋಜನೆಗೆ ದಾಖಲೆಯು ಅವಶ್ಯಕವಾಗಿದ್ದು ಆದರೆ ಇದೊಂದು ಬೆಳವಣಿಗೆಯ ವಿಧಾನವಾಗಿದ್ದು ಕಾರ್ಯವನ್ನು ಸಾಕಾರಗೊಳಿಸಲು ನೇತೃತ್ವವಹಿಸಲು ಮೌಲ್ಯಮಾಪನ ಮಾಡಲು ತುಂಬಾ ಪ್ರಯೋಜನಕಾರಿಯಾಗಿದೆ ಸ್ವಾಭಾವಿಕವಾಗಿ ಶಾಲಾಭಿವೃದ್ಧಿ ಯೋಜನೆಯು ಮಕ್ಕಳ ಕಲಿಕೆ ಹಾಗೂ ಶಿಕ್ಷಕರ ಬೋಧನೆಯಲ್ಲಿ ಮಹತ್ವಾಕಾಂಕ್ಷೆಯನ್ನು ಹೆಚ್ಚಿಸುತ್ತಾ ಸಾಧಿಸಲು ಅನುವು ಮಾಡಿಕೊಡುತ್ತದೆ.

ಈ ವಿಭಾಗವು ಒಂದು ಸಮಗ್ರ ಘಟಕದ ಭಾಗವಾಗಿದ್ದು ನಾಯಕತ್ವದ ಕೇಂದ್ರ ಕ್ಷೇತ್ರವನ್ನು ಸೂಚಿಸುತ್ತದೆ ನೀವು ಇದರ ಉಪಯುಕ್ತತೆಯನ್ನು ಮುಂದಿನ ಘಟಕಗಳಲ್ಲಿ ಕಾಣಬಹುದಾಗಿದೆ.

- ಸಂಯುಕ್ತ ದೃಷ್ಟಿಕೋನವನ್ನು ನಿಮ್ಮ ಶಾಲೆಯ ಅಭಿವೃದ್ಧಿಗಾಗಿ ರೂಪಿಸಲು ಶಾಲೆಯನ್ನು ಸ್ವಾದಲೋಕನದತ್ತ ಮುನ್ನಡೆಸುವದು
- ನಿಮ್ಮ ಶಾಲಾ ಗುಣಮಟ್ಟದ ಅಭಿವೃದ್ಧಿಗಾಗಿ ದಾಖಲೆ ನಿರ್ವಹಿಸುವದು
- ಯೋಜನೆ ಹಾಗೂ ಗಣನೀಯ ಬದಲಾವಣೆಯನ್ನು ಶಾಲೆಯಲ್ಲಿ ತರುವದು.
- ಶಾಲೆಯಲ್ಲಿ ಬದಲಾವಣೆಯನ್ನು ಜಾರಿಗೊಳಿಸುವದು

## ಸಾಧನೋಪಾಯಗಳು:

ಸಾಧನೆ : 1 : ಶಾಲಾ ಅಭಿವೃದ್ಧಿ ಯೋಜನೆಯನ್ನು ಪ್ರೇರೇಪಿಸುವ ಅಂಶಗಳು ಪಟ್ಟಿ ಆರ್– 1 ಶಾಲಾ ಅಭಿವೃದ್ಧಿ ಯೋಜನೆಯ ಬಗ್ಗೆ ಉದಾಹರಿಸುತ್ತದೆ ಪಟ್ಟಿ ಆರ್ – 2 ಖಾಯಾದ ನಿಮ್ಮ ಸ್ವಂತ ಯೋಜನೆಯ ಪ್ರೇರೇಪಿಸಲು ಸಹಾಯಕವಾಗಿದೆ.

**ಪಟ್ಟಿ ಆರ್ ನಂ: 1** ಶಾಲಾ ಅಭಿವೃದ್ಧಿ ಯೋಜನೆಯ ಕುರಿತಾಗಿ ಕೆಲಸ ಮಾಡಿದ ಉದಾಹರಣೆ

| ಅಭಿವೃದ್ಧಿಯ ಮೊದಲ ಪ್ರಾಶಸ್ತ್ಯ | ಸಂಪೂರ್ಣವಾದ ಕ್ರಿಯೆ | ವ್ಯಕ್ತಿಯ ಹೊಣೆಗಾರಿಕೆ\ ಜವಾಬ್ದಾರಿ | ನಿರ್ದಿಷ್ಟ ವೇಳೆ | ಸಂಪನ್ಮೂಲಗಳ ಅವಶ್ಯಕತೆ | ಯಶಸ್ವಿನ ಅಳಗೆಗೋಲು |
|---|---|---|---|---|---|
| ಶಾಲೆಯ ಹೆಣ್ಣು ಮಕ್ಕಳ ಹಾಜರಾತಿಯಲ್ಲಿ ಸುಧಾರಿಸುವದು | ವಿದ್ಯಾರ್ಥಿನಿಯರನ್ನು ಭೇಟಿ ಮಾಡಿ ಯಾವ ರೀತಿ ತಮ್ಮ ಸಾಧನೆಯನ್ನು ಸಮರ್ಥವಾಗಿ ಪ್ರದರ್ಶಿಸಿದರು | ಶಾಲಾ ನಾಯಕ | ಕೆಲ ತಿಂಗಳುಗಳು | ಸಮಯ ತೆಗೆದುಕೊಳ್ಳುವಿಕೆ | ಪಾಲಕರು ಪ್ರಭಾವಿತಗೊಂಡು ತಮ್ಮ ಹೆಣ್ಣು ಮಕ್ಕಳನ್ನು ಶಾಲಾ ಹಾಜರಾತಿ ಹೆಚ್ಚಿಸುವಲ್ಲಿ ಪ್ರೊತ್ಸಾಹಿಸುವಿಕೆ |
| | ವಿದ್ಯಾರ್ಥಿನಿಯರು ಸ್ವಂತವಾಗಿ ಪಾಠ ಬೋಧನೆಯನ್ನು ಮಾಡುವಂತೆ ಪ್ರಶಂಶಿಸುವುದು | ಎಲ್ಲಾ ಶಿಕ್ಷಕರು | ಬಹು ಬೇಗನೆ | ಟಿಇಎಸ್ಎಸ್ ಇಂಡಿಯಾ ಘಟಕ | ವಿದ್ಯಾರ್ಥಿನಿಯರು ಕ್ರಿಯಾಶೀಲರಾಗಿ ಪಾಠ ಬೋಧನೆ ಪಾಲ್ಗೊಂಡು (ಯಾವ ರೀತಿ ಕಲಿಕೆ ಪ್ರಾರಂಭವಾಯಿತು) |
| | ಸಾಯಂಕಾಲದಲ್ಲಿ ಶಾಲೆ ಪ್ರಾರಂಭಿಸಿ ಸಾಧನೆ ಮಾಡಿದ ಮಹಿಳಾ ಉದ್ಯಮಿಯನ್ನು ಆಹ್ವಾನಿಸುವದು | ಆಶಾವಾದಿಗಳು | ಅಕ್ಟೋಬರ (ಮುಖ್ಯ ಪರೀಕ್ಷೆಯ ಮುಂಚೆ) | | ಸಂದರ್ಭ ಚನ್ನಾಗಿ ಒದಗಿ |
| | ವಿದ್ಯಾರ್ಥಿನಿಯರ ವೈಯಕ್ತಿಕ ಕೊಠಡಿಯನ್ನು ಸುರಕ್ಷಿತವಾಗಿರಿಸಿ ಸಾಕಷ್ಟು ನೀರು ಹಾಗೂ ಬಾಗಿಲುಗಳ ಕದವನ್ನು ಭದ್ರವಾಗಿರಿಸುವದು | ನಿರ್ದಿಷ್ಟ ವ್ಯಕ್ತಿಗೆ ಜವಾಬ್ದಾರಿ | ಬಹುಬೇಗನೆ | ಕಟ್ಟಡ ಸಾಮಗ್ರಿಗಳು | ಒಳ್ಳೆಯ ಸ್ಥಿತಿಯ ಕೊಠಡಿಗಳು |

**ಪಟ್ಟಿ ಆರ್ 2 ಶಾಲಾ ಅಭಿವೃದ್ಧಿ ಯೋಜನೆ ಮಾದರಿ ಅಂಶ**

| | | | | |
|---|---|---|---|---|
| ಯಶಸ್ವಿನ ಅಳತೆ ಗೋಲು | | | | |
| ಸಂಪನ್ಮೂಲಗಳ ಅವಶ್ಯಕತೆ | | | | |
| ನಿರ್ದಿಷ್ಟ ವೇಳೆ | | | | |
| ವ್ಯಕ್ತಿಯ ಹೊಣೆಗಾರಿಕೆ ಜವಾಬ್ದಾರಿ | | | | |
| ಸಂಪೂರ್ಣವಾದ ಕ್ರಿಯೆ | | | | |
| ಅಭಿವೃದ್ದಿಯ ಮೊದಲ ಪ್ರಾಶಸ್ತ್ಯ | | | | |

# ಉಲ್ಲೇಖಗಳು / ಗ್ರಂಥಸೂಚಿ:

ಅಮೇರಿಕಾ ಇಂಡಿಯಾ ಫೌಂಡೇಶನ್ (2011) ಶಾಲಾ ಉಸ್ತುವಾರಿ ಸಮಿತಿ ಮತ್ತು ಶಿಕ್ಷಣದ ಹಕ್ಕು ಕಾಯ್ದೆ 2009ರ ಎಸ್.ಎಂ.ಸಿ. ತರಬೇತಿ ಸಂಪನ್ಮೂಲ ಸಾಮಗ್ರಿಗಳು, ನವ ದೆಹಲಿ, ಈ ಮಾಹಿತಿ ಅಂತರ್ ಜಾಲ *http://aif.org/wp-content/uploads/2012/08/SMCBookl.pdf* ದಲ್ಲಿ ಲಭ್ಯವಿರುವುದು.

(19.12.2014ರಲ್ಲಿ ಪಡೆಯಲಾಗಿದೆ). (American India Foundation (2011) School Management Committee and the Right to Education. Act 2009: Resource Material for SMC Training).

ಅಮುತೇನು ಎನ್. ಮತ್ತು ಇತರರು (2002) ಮಾದರಿ 6 : ಶಾಲಾ ಅಭಿವೃದ್ಧಿ ಯೋಜನೆ, ಮೂಲ ಶಿಕ್ಷಣ ಮಂತ್ರಾಲಯ, ಕ್ರೀಡೆ ಮತ್ತು ಸಂಸ್ಕೃತಿ, ನಮೀಬಿಯಾ ರಾಷ್ಟ್ರೀಯ ಶಿಕ್ಷಣ ಅಭಿವೃದ್ಧಿ ಸಂಸ್ಥೆ, (Amuthenu, N. et al. (2002) Module 6: School Development Planning. Ministry of Basic Education, Sport and Culture, Namibia: National Institute for Educational Development)

ಬೆರ್ಗೇಸನ್ ಟಿ.(2005) ಶಾಲಾ ಅಭಿವೃದ್ಧಿ ಯೋಜನೆ : ಪ್ರಕ್ರಿಯೆ ಮಾರ್ಗಸೂಚಿ, 3ನೇ ಆವೃತ್ತಿ, ಒಲಂಪಿಯಾ, ಡಬ್ಲ್ಯು.ಎ, ಸಾರ್ವಜನಿಕ ಶಿಕ್ಷಣ ಅಧೀಕ್ಷಕರ ಕಛೇರಿ. ಮಾಹಿತಿಯನ್ನು ಅಂತರಜಾಲ : http://k12.wa.us/StudentAndSchoolSuccess/SIPGuide/SIPGuide.pdf ದಲ್ಲಿ ಲಭ್ಯವಿರುವುದು. (19.12.2014ರಲ್ಲಿ ಪಡೆಯಲಾಗಿದೆ). (Bergeson, T. (2005) School Improvement Planning: Process Guide, 3rd edn. Olympia, WA: Office of Superintendent of Public Instruction)

ಕುಕ್, ಡಿ. ಮತ್ತು ವ್ಯನ್‌ಸ್ಟೋನ್, ಎ, (2000) ಶಾಲಾ ಅಭಿವೃದ್ಧಿ ಯೋಜನೆ : ಒಂದು ನೀತಿ ಕೈಪಿಡಿ, ಶಿಕ್ಷಕರು ಮತ್ತು ಶಾಲಾ ಪರಿಷತ್ತು, ಟೊರಾಂಟೋ, ಶಿಕ್ಷಣ ಸುಧಾರಣೆ ಆಯೋಗ, ಮಾಹಿತಿಯನ್ನು ಅಂತರಜಾಲ : http://www.edu.gov.on.ca/eng/document/reports/sihande.pdf ದಲ್ಲಿ ಲಭ್ಯವಿರುವುದು. (19.12.2014ರಲ್ಲಿ ಪಡೆಯಲಾಗಿದೆ). ಶಿಕ್ಷಣ ಸುಧಾರಣೆ ಆಯೋಗವು ಒಂಟಾರಿಯೋ ಶಿಕ್ಷಣ ಸಚಿವಾಲಯದ ಅಂಗಸಂಸ್ಥೆಯಾಗಿದೆ. (Cooke, D. and Vanstone, A.,(2000) School Improvement Planning: A Handbook for Principals, Teachers, and School Councils. Toronto: Education Improvement Commission. The Education Improvement Commission is an arm's-length agency of the Ontario Ministry of Education).

ಶಿಕ್ಷಣ ಇಲಾಖೆ (2005) ಶಾಲಾ ಅಭಿವೃದ್ಧಿ ಯೋಜನೆ ಲಂಡನ್: ಶಿಕ್ಷಣ ಇಲಾಖೆ ಮಾಹಿತಿಯನ್ನು ಅಂತರಜಾಲ : http://www.deni.gov.uk/sdp_guidance-2.pdf ದಲ್ಲಿ ಲಭ್ಯವಿರುವುದು. (19.12.2014ರಲ್ಲಿ ಪಡೆಯಲಾಗಿದೆ).Department of Education (2005) School Development Planning. London: Department of Education.

ಮಿಂಚಂಚು ಆರ್. ಮತ್ತು ಅಂಡ್ರೆ, ಜಿ. (2010) ರುವಾಂಡಾ ಪ್ರೌಢ ಶಾಲೆಗಳ ಶಾಲಾ ಯೋಜನೆ. ರಿಪಬ್ಲಿಕ್ ರುವಾಂಡಾ ಎಂ.ಐ.ಎನ್.ಇ.ಡಿ.ಯು.ಸಿ – ಶಾಲಾ ಉಸ್ತುವಾರಿ. Emile, R. and Andre, G. (2010) School Planning for Secondary Schools in Rwanda. Republic of Rwanda: MINEDUC-School Management.

ಗೋವಿಂದ ಆರ್. ಮತ್ತು ಬಂಡೋಪಾಧ್ಯಾಯ ಎಂ. (2008) ಭಾರತದಲ್ಲಿ ಪ್ರಾಥಮಿಕ ಶಿಕ್ಷಣ ಪ್ರವೇಶ: ದೇಶಿ ವಿಶ್ಲೇಷಣಾತ್ಮಕ ವಿಮರ್ಶೆ : ಫಾಲ್ಮರ್ : ರಚನೆ, ಅಂತರಜಾಲ: http://core.kmi.open.ac.uk/download/pdf/2709559.pdf ದಲ್ಲಿ ಲಭ್ಯವಿದೆ. (19.12.2014ರಲ್ಲಿ ಪಡೆಯಲಾಗಿದೆ). (Govinda, R. and Bandyopadhyay, M. (2008) Access to Elementary Education in India: Country Analytical Review. Falmer: CREATE)

ಹರ್ವೆ, ಎಸ್, ಪಿಟ್‌ಮ್ಯಾನ್, ಎಂ., ಥಾಮಸ್, ಎಂ. ಮತ್ತು ತಿಗುರ್‍ಯೆರ, ಎಸ್. (2007) ಪ್ರಾರಂಭ ಶಿಕ್ಷಣ ನಿರ್ವಹಣಾ ಬಲಪಡಿಸುವಿಕೆ: ಗುಣಮಟ್ಟದ ನಿರ್ವಹಣೆ, ಮಾದರಿ 2 – ಶಾಲಾ ಸುಧಾರಣೆ ನಿರ್ವಹಣೆ, ಉಗಾಂಡ ಶಿಕ್ಷಣ ಮತ್ತು ಕ್ರಿಡಾ ಸಚಿವಾಲಯ, (Harvey, S., Pittman, M., Thomas, M. and Tiguryera, S. (2007) Education Management Strengthening Initiative: Managing For Quality. Module 2 – Managing School Improvement. Uganda: Ministry of Education and Sports.) ಅಂತರಜಾಲ: http://uphold.jsi.com/Docs/Resources/Training/ Education /education_management _strengthening _initiative _module2.pdf ಲಭ್ಯವಿದೆ. (19.12.2014ರಲ್ಲಿ ಪಡೆಯಲಾಗಿದೆ).

ಮಿಕಿನ್‌ಸೇ & ಕೋ., (2007) ವಿಶ್ವದ ಅತ್ಯತ್ತಮ ಪ್ರದರ್ಶನ ನೀಡುವ ಶಾಲೆಗಳ ವ್ಯವಸ್ಥೆ ಹೇಗೆ ಉನ್ನತಮಟ್ಟಕ್ಕೇರಿತು (ಅಂತರಜಾಲ) http://mckinseyonsociety.com/how-the-worlds-best-performing-schools-come-out-on-top/ ಲಭ್ಯವಿದೆ. (19.12.2014ರಲ್ಲಿ ಪಡೆಯಲಾಗಿದೆ).

ಮಿಶ್ರಾ, ಎ.ಕೆ., ಅಖ್ತರ್, ಎನ್ ಮತ್ತು ತಾರೀಕ ಎಸ್ (2011) 'ಗ್ರಾಮಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ' (ಉತ್ತರ ಪ್ರದೇಶದ ವಿಶ್ಲೇಷಣಾತ್ಮಕ ಅಧ್ಯಯನ), ಎಸ್.ಎಂ.ಎಸ್. ವಾರಣಾಸಿ, ಸಂಪುಟ 8, ಪುಟ 44–53 ಅಂತರಜಾಲ http://tinyurl.com/olj3juz ಲಭ್ಯವಿದೆ. (19.12.2014ರಲ್ಲಿ ಪಡೆಯಲಾಗಿದೆ). (Mishra, A.K., Akhtar, N. and Tarika, S. (2011) 'Role of the Panchayati Raj institutions in rural development (an analytical study of Uttar Pradesh)', SMS Varanasi, vol. 8, no. 1, pp. 44–53).

ಮುಖೋಪಾಧ್ಯಾಯ, ಆರ್. ರಾಮಕುಮಾರ, ಆರ್ ಮತ್ತು ವಾಸವಿ, ಎ.ಆರ್ (2009) ಪ್ರಾಥಮಿಕ ಶಿಕ್ಷಣ ನಿರ್ವಹಣಾ ಸ್ವರೂಪ ಮತ್ತು ತಂತ್ರಗಳು, ನವ ದೆಹಲಿ, ಎನ್.ಯು.ಇ.ಪಿ.ಎ ಅಂತರಜಾಲ http://www.educationforallinindia.com/management-of-elementary-education-in-india.pdf ಲಭ್ಯವಿದೆ. (19.12.2014ರಲ್ಲಿ ಪಡೆಯಲಾಗಿದೆ). (Mukhopadhyay, R., Ramkumar, R. and Vasavi, A.R. (2009) Management of Elementary Education Structures and Strategies. New Delhi: NUEPA)..

ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ರಾಷ್ಟ್ರೀಯ ಮಂಡಳಿ (ಎನ್.ಸಿ.ಇ.ಆರ್.ಟಿ) (2005) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) (ಎನ್.ಸಿ.ಎಫ್), ನವ ದೆಹಲಿ. ಅಂತರಜಾಲ http://www.teindia.nic.in/files/ncf-2005.pdf ಲಭ್ಯವಿದೆ. (19.12.2014ರಲ್ಲಿ ಪಡೆಯಲಾಗಿದೆ). (National Council of Educational Research and Training (NCERT) (2005) *National Curriculum Framework 2005* (NCF). New Delhi: National Council of Educational Research and Training).

ಶಿಕ್ಷಕರಿಗಾಗಿ ವೃತ್ತಿಪರ ಸೇವಾ ಅಭಿವೃದ್ಧಿ (ದಿನಾಂಕ ನಮೂದಿತವಾಗಿಲ್ಲ) 'ಆರು ಹಂತದ ಪ್ರಕ್ರಿಯೆಗಳು' (ಅಂತರಜಾಲದಲ್ಲಿ) http://cmsold.pdst.ie/node/804 ಲಭ್ಯವಿದೆ (17.12.2014ರಲ್ಲಿ ಪಡೆಯಲಾಗಿದೆ) (Professional Development Service for Teachers (undated) 'The six step process').

ಶಾಲಾ ಅಭಿವೃದ್ಧಿ ಯೋಜನೆಯ ಆರಂಭ (1990) ಶಾಲಾ ಅಭಿವೃದ್ಧಿ ಯೋಜನೆ: ಎರಡನೇ ಹಂತದ ಶಾಲಾ ಮಟ್ಟಕ್ಕೆ ಪರಿಚಯ, ಶಿಕ್ಷಣ ಮತ್ತು ವಿಜ್ಞಾನ ಮಂತ್ರಾಲಯ, ಐರಲ್ಯಾಂಡ್ ಸರ್ಕಾರ, http://www.cavanvec.ie/PublicationFiles/SDPI_Book.pdf ಲಭ್ಯವಿದೆ (19.12.2014ರಲ್ಲಿ ಪಡೆಯಲಾಗಿದೆ). (School Development Planning Initiative (1999) School Development Planning: An Introduction to Second Level Schools. Ministry of Education and Science: Government of Ireland)

ವಿದ್ಯಾರ್ಥಿ ಪರಿಷತ್ ವರದಿ (ದಿನಾಂಕ ನಮೂದಿತವಾಗಿಲ್ಲ) ' ವಿದ್ಯಾರ್ಥಿ ಪರಿಷತ್ ಶಿಕ್ಷಕರ ಸಂಬಂಧ ಮತ್ತು ವಿದ್ಯಾರ್ಥಿ ಪರಿಷತ್' ಅಂತರಜಾಲದಲ್ಲಿ http://www.studentcouncil.ie/Running ಲಭ್ಯವಿದೆ (19.12.2014ರಲ್ಲಿ ಪಡೆಯಲಾಗಿದೆ).. (' Student Council Report (undated) 'The student council liaison teacher and the student council')

ಉಪಾಧ್ಯಾಯ ಹೆಚ್.ಪಿ., ಲಾಮಿಹಾನೆ, ಎಸ್., ಅವಸ್ಥಿ, ಎಲ್.ಡಿ., ದುಬೆ, ಎನ್., ಆಚಾರ್ಯ್, ಪಿ. ಮತ್ತು ಶ್ರೇಷ್ಠ, ಓ.ಎಂ. (2005) ಶಾಲಾ ಅಭಿವೃದ್ಧಿ ಯೋಜನಾ ಅನುಷ್ಠಾನ; ಯಶಸ್ವಿ ಪ್ರಕರಣಗಳ ಗುರುತಿಸುವಿಕೆ, ಬೆಳಕು : ಶೈಕ್ಷಣಿಕ ನಾವಿನ್ಯತೆ ಮತ್ತು ಅಭಿವೃದ್ಧಿ ಸಂಶೋಧನಾ ಕೇಂದ್ರ, ತ್ರಿಭುವನ್ ವಿಶ್ವವಿದ್ಯಾಲಯ, ಅಂತರಜಾಲದಲ್ಲಿ : http://tinyurl.com/orkrtv8 ಲಭ್ಯವಿದೆ (19.12.2014ರಲ್ಲಿ ಪಡೆಯಲಾಗಿದೆ).. ('Upadhyaya, H.P., Lamihhane, S., Awasthi, L.D., Dubey, N., Acharya, P. and Shrestha, O.M. (2005) *Implementation of School Improvement Plan: Identification of Successful Cases*. Balkhu: Research Centre for Educational Innovation and Development, Tribhuvan University')

ಜೈದಿ, ಎಸ್. ಎಂ.ಐ.ಎ, ಬಿಸ್ವಾಲ್, ಕೆ, ಮೊಹಂತಿ, ಎನ್. ಕೆ. ಮತ್ತು ಲಾಲ್ ಎ.ಎ.ಸಿ (2011) ಪ್ರೌಢ ಶಿಕ್ಷಣ ಯೋಜನೆ ಮತ್ತು ಗುಣಮಟ್ಟ ಮೌಲ್ಯ ಕೈಪಿಡಿ, ನವ ದೆಹಲಿ, ಎನ್.ಯು.ಇ.ಪಿ.ಎ ಅಂತರಜಾಲದಲ್ಲಿ :http://mhrd.gov.in/sites/upload_files/mhrd/files/upload_document/Planning%20And%20Appraisal%20Manual%20(%20NUEPA).pdf ಲಭ್ಯವಿದೆ (19.12.2014ರಲ್ಲಿ ಪಡೆಯಲಾಗಿದೆ).. Zaidi, S.M.I.A., Biswal, K., Mohanty, N.K. and Lal, A.A.C. (2011) *Secondary Education: Planning and Appraisal Manual*. New Delhi: NUEPA.Available from:

# ಕೃತಜ್ಞತೆಗಳು

ಮೂರನೇ ಪಕ್ಷದ ವಸ್ತುಗಳನ್ನು ಹೊರತುಪಡಿಸಿ ಮತ್ತು ಕೆಳಗಿನ ಹೇಳಿಕೆಗೆ ಹೊರತಾಗಿ, ವಸ್ತು ವಿಷಯಗಳನ್ನು ಸೃಜನಾತ್ಮಕ ಜನಸಾಮಾನ್ಯ ಲಕ್ಷಣಗಳಿಗೆ – ಸಮಾನವಾಗಿ ಹಂಚಿಕೆ ಮುಕ್ತ ಪರವಾನಿಗೆ ಲಭ್ಯವಾಗುವಂತೆ (http://creativecommons.org/licenses/by-sa/3.0/) ಇರುತ್ತದೆ. ಈ ಯೋಜನೆಗೆ ಸಾಮಗ್ರಿಗಳನ್ನು ಪರವಾನಿಗೆ ಅಡಿಯಲ್ಲಿ, ವಸ್ತು ಮಾಲಿಕತ್ವಕ್ಕೆ ಒಪ್ಪಿಕೊಂಡು ಬಳಸಲಾಗುತ್ತಿದೆ ಮತ್ತು ಇದು ಸೃಜನಾತ್ಮಕ ಜನಸಾಮಾನ್ಯ ಪರವಾನಿಗೆ ವಿಷಯವಾಗಿರುವುದಿಲ್ಲ. ಅಂದರೆ ಇದರ ಅರ್ಥವು ಕೇವಲ ಟೆಸ್ – ಇಂಡಿಯಾ ಯೋಜನೆಯೊಳಗೆ ಹೊಂದಿಸಿಕೊಳ್ಳದೇ ಬಳಸಬಹುದು ಮತ್ತು ಯಾವುದೇ ನಂತರದ ಓ.ಇ.ಆರ್. ಆವೃತ್ತಿಗಳಿಗಲ್ಲ. ಇದು ಟೆಸ್ – ಇಂಡಿಯಾ, ಓ.ಯು ಮತ್ತು ಯು.ಕೆ.ಎ.ಐ.ಡಿ ಲೋಗೊ ಚಿನ್ಹೆಗಳನ್ನು ಒಳಗೊಂಡಿವೆ.

ಹಕ್ಕುಸ್ವಾಮ್ಯ ಮಾಲೀಕರನ್ನು ಸಂಪರ್ಕಿಸುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದೆ. ಅಜಾಗರೂಕತೆಯಿಂದ ಯಾರದಾವರನ್ನು ಕಡೆಗಾಣಿಸಿದ್ದ ವೇಳೆ, ಪ್ರಕಾಶಕರು ತೃಪ್ತಿರಾಗಲು ಮೊದಲ ಅವಕಾಶದಲ್ಲಿ ಅಗತ್ಯ ವ್ಯವಸ್ಥೆ ಮಾಡುವೆವು.

ವೀಡಿಯೋ (ವೀಡಿಯೋ ಸ್ಥಬ್ದಪರಿಕರಗಳು ಸೇರಿ): ಭಾರತದಾದ್ಯಂತ, ಮುಕ್ತ ವಿಶ್ವ ವಿದ್ಯಾಲಯದೊಂದಿಗೆ ವೀಡಿಯೋ ನಿರ್ಮಾಣ ಕಾರ್ಯದಲ್ಲಿ ಭಾಗಿಯಾದ ಎಲ್ಲಾ ಶಿಕ್ಷಕರ ಶಿಕ್ಷಣಕಾರ್ಯಕರ್ತರು, ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಧನ್ಯವಾದಗಳನ್ನು ಅರ್ಪಿಸುವೆವು.